# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



NOW HAMPI TIMES E-PAPER HAS BEEN REACHED
50,000 Plus readers
Place Your Ads here
Reach New Audience
9448633038 Contact For: News, Events Coverage, Ads
hampitimes@gmail.com Valmiki Circle, Hosapete-583201



ಸಂಪುಟ:01 • ಸಂಚಿಕೆ:285 • ನೋಂದಣಿ ನಂ.:KARKAN27911 • ವಿಜಯನಗರ • 11.04.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:285 • Reg.No:KARKAN27911 • VIJAYANAGARA • 11.04.2024 • Thursday • Page:04 • Rs:2


**ಬಂದಿದೆ ಮತದಾನದ ಅವಕಾಶ, ನಿರ್ಲಕ್ಷಿಸಿ ನಿರಾಶಗಬೇಡಿ**

# ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ರಥೋತ್ಸವ ಅದ್ಧೂರಿ

## ರಥೋತ್ಸವಕ್ಕೆ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಶ್ರೀಗಳಿಂದ ಚಾಲನೆ | ಗುತ್ತಿಗೆದಾರ ಎಲ್.ಬಸವರಾಜಗೆ 1,44,000 ರೂ.ಗೆ ಒಲಿದ ರಥೋತ್ಸವ ಪಟ(ಧ್ವಜ)



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ಮಹಾರಥೋತ್ಸವಕ್ಕೆ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಬುಧವಾರ ಸಂಜೆ ಚಾಲನೆ ನೀಡಿದರು. ಮೇದಾರ ಸಮಾಜದ ಯುವಕರು ಸಂಪ್ರದಾಯದಂತೆ ಸನ್ನೆ ಹಾಕಿದರು. ಶ್ರೀಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ ಪುಷ್ಪಲಂಕಾರ ನೆರವೇರಿಸಲಾಯಿತು. ಭಕ್ತರು ಬೆಳಿಗ್ಗೆಯಿಂದಲೇ ದೇವಸ್ಥಾನಕ್ಕೆ ಆಗಮಿಸಿ ಫಲಪುಷ್ಪ ನೈವೇದ್ಯ ಸಮರ್ಪಿಸಿದರು. ಸಂಜೆ ಜರುಗಿದ ರಥೋತ್ಸವದಲ್ಲಿ ನಗರ ಸೇರಿದಂತೆ ವಿವಿಧ ಜಿಲ್ಲೆಗಳಿಂದ, ಗ್ರಾಮಗಳಿಂದ ಭಕ್ತರು ಆಗಮಿಸಿ ರಥೋತ್ಸವಕ್ಕೆ ಉತ್ತುತ್ತಿ, ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ದೇವಸ್ಥಾನ ಆಡಳಿತ ಮಂಡಳಿ ಸದಸ್ಯರು ಈ ಬಾರಿ ದೇವರ ದರ್ಶನಕ್ಕಾಗಿ ಭಕ್ತರಿಗೆ ವಿಶೇಷ ವ್ಯವಸ್ಥೆ ಕಲ್ಪಸಿದ್ದರು. ಪೊಲೀಸರು ಸೂಕ್ತ ಭದ್ರತೆ ಒದಗಿಸಿದ್ದರು. ಜಾಗೃತ ನಾಯಕ ಬಳಗ ಸೇರಿದಂತೆ ಇತರ ಸಂಘಟನೆಗಳು ಭಕ್ತರಿಗೆ ತಂಪು ಪಾನೀಯ, ಮಜ್ಜಿಗೆ, ನೀರಿನ ವ್ಯವಸ್ಥೆ ಮಾಡುವ ಮೂಲಕ ಸೇವೆ ಸಲ್ಲಿಸಿದರು.



ಹೊಸಪೇಟೆ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ಮಹಾರಥೋತ್ಸವದ ನಿಮಿತ್ತ ಮಂಗಳವಾರ ಸಂಜೆ ಅಗ್ನಿಕುಂಡದಲ್ಲಿದ್ದ ಬೆಂಕಿಯನ್ನು ಶ್ರದ್ಧಾಭಕ್ತಿಯಿಂದ ಹಾಯ್ದು ಹರಕೆ ಸಮರ್ಪಿಸಿದರು.



ಹೊಸಪೇಟೆ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ಮಹಾರಥೋತ್ಸವಕ್ಕೆ ಸಂಪ್ರದಾಯದಂತೆ ಸನ್ನೆ ಹಾಕಲು ಮೇದಾರ ಸಮಾಜದ ಹಿರಿಯರು ಹೂವಿನ ಹಾರದೊಂದಿಗೆ ಯುವಕರನ್ನು ಕರೆದೊಯ್ದ ಕ್ಷಣ.




# ಸಂಕಲ್ಪ ಧೃಡವಾಗಲಿ.

## ಸಿಹಿ ಕಹಿ

ಸಿಹಿ ಕಹಿಗಳು ಜೀವನದಲ್ಲಿ ಇರಬೇಕು. ಕಹಿ ಇದ್ದರೆ ಮಾತ್ರ ನಮಗೆ ಸಿಹಿಯ ಬೆಲೆ ಗೊತ್ತಾಗುತ್ತದೆ. ಯುಗಾದಿ ಹಬ್ಬದಲ್ಲಿ ಚಾಂದ್ರಮಾನ ಹಾಗೂ ಸೌರಮಾನ ಯುಗಾದಿ ಎಂಬ ಎರಡು ವಿಧಗಳಿವೆ. ಚಂದ್ರನ



ಚಲನೆಯನ್ನು ಅನುಸರಿಸಿ ಅದರ ತಿಥಿಯ ಅನುಸಾರವಾಗಿ ನಡೆದುಕೊಳ್ಳುವರು ಚಾಂದ್ರಮಾನ ಯುಗಾದಿಯನ್ನು ಆಚರಿಸಿ ಸಂಭ್ರಮಿಸುತ್ತಾರೆ. ಸೂರ್ಯನು ಮೇಷ ರಾಶಿಗೆ ಪ್ರವೇಶ ಮಾಡುವ ದಿನವನ್ನು ಸೌರಮಾನ ಯುಗಾದಿಯನ್ನಾಗಿ ಆಚರಿಸಲಾಗುತ್ತದೆ. ಚಾಂದ್ರಮಾನ ಯುಗಾದಿಯನ್ನು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಆಚರಿಸುತ್ತಾರೆ. ಸೌರಮಾನ ಯುಗಾದಿಯನ್ನು ತಮಿಳುನಾಡು ಕೇರಳ ಹಾಗೂ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಆಚರಿಸಲಾಗುತ್ತದೆ.

ಯುಗಾದಿಯಂದು ನಸುಕಿಗೆ ಎದ್ದು, ಸ್ನಾನ ಮಾಡಿ, ರಂಗೋಲಿ ಹಾಕಿ, ಬಾಗಿಲಿಗೆ ತೋರಣ ಕಟ್ಟಿ, ಹೊಸ ಬಟ್ಟೆ ಧರಿಸಿ ಬೇವು-ಬೆಲ್ಲ ಹಾಗೂ ಹೊಸ ಪಂಚಾಗವನ್ನು ದೇವರ ಮುಂದಿರಿಸಿ ಪೂಜೆ ಮಾಡಲಾಗುತ್ತದೆ. ಬೇವು ಬೆಲ್ಲವು ಜೀವನದ ಸಿಹಿ ಹಾಗೂ ಕಹಿಗಳನ್ನು ಸೂಚ್ಯವಾಗಿ ಹೇಳುತ್ತದೆ. ಪ್ರತಿ ದಿನ ಹಗಲು-ರಾತ್ರಿ ಹೇಗೆ ಆಗುತ್ತದೋ ಹಾಗೆಯೇ ನಮ್ಮ ಜೀವನದಲ್ಲಿ ಸುಖ(ಸಿಹಿ) ಹಾಗೂ ದುಃಖ(ಕಹಿ)ಗಳ ಮಿಶ್ರಣವು ಸದಾ ಇರುತ್ತದೆ. ಈ ಸುಖ ದುಃಖಗಳನ್ನು ನಾವು ಸಮಾನವಾಗಿ ಸ್ವೀಕರಿಸಬೇಕು. ಒಮ್ಮೆ ನಾವು ಜೀವನದಲ್ಲಿ ಗೆಲ್ಲುತ್ತೇವೆ. ಹಾಗೆಯೇ ಮತ್ತೊಮ್ಮೆ ಸೋಲು ಉಂಟಾಗುತ್ತದೆ. ಎಲ್ಲಾ ವೇಳೆಯಲ್ಲೂ ನಾವು ಅಂದುಕೊಂಡ ಹಾಗೆ ಏನೂ ನಡೆಯುವುದಿಲ್ಲ. ಆ ಸಂದರ್ಭದಲ್ಲಿ ನಾವು ಹತಾಶರಾಗಬಾರದು.

ಸಾಗರದಲ್ಲಿ ಅಲೆಗಳ ಏರಿಳಿತವು ಹೇಗೆ ಸಹಜವೊ ಹಾಗೆಯೇ ಸಂಸಾರ ಸಾಗರದಲ್ಲಿ ಸುಖ ದುಃಖದ ಅಲೆಗಳು ಸಹಜವಾದುದು. ಉತ್ತಮ ನಾವಿಕನು ಹೇಗೆ ಅಲೆಗಳಿಗೆ ಅಂಜದೆ ಹಡಗನ್ನು ಮುನ್ನೆಡೆಸುವನೋ ಹಾಗೆಯೇ ಜೀವನದ ನೌಕೆಯನ್ನು ಕೂಡ ಭಗವನ್ನಾಮದ ಬಲದೊಂದಿಗೆ ಸುಖ ದುಃಖ, ನೋವು ನಲಿವು, ಹೊಗಳಿಕೆ ತೆಗಳಿಕೆ, ಹೀಗೆ ಸದಾ ದ್ವಂದ್ವಗಳ ಅಲೆಗಳ ಮೂಲಕ ದಾಟಿ ಚಿರಶಾಂತಿಯ ಮೋಕ್ಷದ ದಡ ಸೇರಬೇಕು.

ಬೇವು ಬೆಲ್ಲವು ಜೀವನದ ಸಿಹಿ ಕಹಿಯ ದ್ಯೋತಕ. ಬೇವು ಬೆಲ್ಲದ ರುಚಿಯು ಹದವಾಗಿ ಮಿಳಿತವಾದರೆ ದೇಹಕ್ಕೆ ಹಿತ. ಹಾಗೆಯೇ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸಿ ಸ್ಥಿತಪ್ರಜ್ಞೆಯಿಂದ ಈ ಎರಡೂ ಅನುಭವಗಳನ್ನು ಸ್ವೀಕರಿಸಿ, ಮನಸ್ಸು ದೇಹಗಳೆರಡೂ ಪಕ್ವವಾಗಬೇಕು. ನಿಧಾನವಾಗಿ ಇವರೆಡೂ ಅವಸ್ಥೆಯನ್ನೂ ಮೀರಿದಂತಹ ಸ್ಥಿತಿಯನ್ನು ತಲುಪಬೇಕು. ಆಗಲೇ ಜೀವನದ ಮಹೋದ್ದೇಶವಾದ ಮೋಕ್ಷವನ್ನು ಸಾಧಿಸಿದಂತಾಗಬಹುದು. ಆಗಲೇ ಈ ದ್ವಂದ್ವ ಜೀವನಕ್ಕೆ ಮುಕ್ತಿ ಸಾಧ್ಯ. ಒಂದು ಬಾರಿ ಈ ಅನುಭವ ಪಡೆದರೆ ನಂತರ ಬಾಳೆಲ್ಲವೂ ಒಂದು ತೆರನಾದ ರಂಗಾಯಣ. ಇಲ್ಲಿ ಪಾತ್ರ ರೂಪದಲ್ಲಿ ಎದುರಾಗುವ ಸನ್ನಿವೇಶಗಳಲ್ಲಿ ದ್ವಂದ್ವ ಇದೆ. ಆದರೆ ಪಾತ್ರಧಾರಿಗೆ ಅದು ತಟ್ಟುವುದಿಲ್ಲ. ವೇಷವಿದ್ದಾಗ ಮಾತ್ರ ಅದರಲ್ಲಿ ತತ್ಪರ. ಉಳಿದಂತೆ ಅದು ಸದಾ ನಡೆಯುತ್ತಿರುವ ಜಗನ್ನಾಟಕ. ನೋಡಿ ಆನಂದಿಸುವುದಷ್ಟೇ ನಮ್ಮ ಕೆಲಸ. ಲೌಕಿಕ ಜಗತ್ತಿನಲ್ಲಿ ನಮ್ಮ ಪಾತ್ರವು ಹೀಗೆ ಇರಬೇಕು. ಕಮಲದ ಎಲೆಯ ನೀರಹನಿಗಳ ತರಹ.

ಸಂಸಾರದಲ್ಲಿದ್ದುಕೊಂಡು ಸುಖ ದುಃಖಗಳಿಗೆ ಸ್ಥಿತಪ್ರಜ್ಞರಾಗುವುದರಲ್ಲಿ ಹೆಚ್ಚಳ ಉಂಟು. ಸನ್ಯಾಸದಲ್ಲಿ ಇದು ಸಾಧ್ಯವಾದರೂ ಎಲ್ಲರಿಗೂ ಸನ್ಯಾಸತ್ವ ಸಾಧ್ಯವಿಲ್ಲ. ಸಂಸಾರಿಯಾಗಿಯೇ ಇದನ್ನು ಸಾಧಿಸಬೇಕು. ಹಳೆಯ(ಜನ್ಮಗಳ) ಭಾರ ಹೊರದೆ ಹೊಸಕನಸಲ್ಲಿ ಕಳೆದು ಹೋಗದೆ, ಹೊಸ ಜೀವನೋತ್ಸಾಹ, ಬದುಕಿಗೆ ಹೊಸ ಅರ್ಥ ತರುವ ಯುಗಾದಿಯ ಹಬ್ಬದಂದು ಭವಸಾಗರವನ್ನು ದಾಟುವ ನಮ್ಮ ಸಂಕಲ್ಪ ಧೃಡವಾಗಲಿ.

**– ಚೇತನ ಭಾರ್ಗವ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:

**Contact for EVENT COVERAGE & Advertisements in Leading News Paper**

**9448633038**

# ನೀವೀಗ ಸ್ವಲ್ಪ ಝಾಡಿಸಿದರೆ ಕಾಲು?



ಕಾವ್ಯದ ಪ್ರೇರಣೆಯನ್ನು ಸಾಮಾನ್ಯವಾಗಿ ಕವಿಗಳ ಪ್ರತಿಭೆಯಲ್ಲಿ, ಅವರಿಗೆ ಇಂಬಾಗಿ ನಿಂತ ಪರಂಪರೆಯ ಕಸುವಿನಲ್ಲಿ, ಕವಿಯ ವಿಶಿಷ್ಟಾನುಭವದಲ್ಲಿ, ಅವರ ಕೈವಶವಾಗಿರುವ ಕಸುಬುದಾರಿಕೆಯಲ್ಲಿ ಹುಡುಕುವ ಪದ್ಧತಿಯಿದೆಯಷ್ಟೆ. ಆದರೆ ಕವಿತೆ ಹುಟ್ಟುವ ಈ ಪ್ರೇರಣ ಮೂಲಗಳಲ್ಲಿ ಚಾರಿತ್ರಿಕ ಒತ್ತಡವೂ ಒಂದು. ಸಾಮಾನ್ಯವಾಗಿ ಉಸಿರುಗಟ್ಟುವ ಒತ್ತಡಗಳಲ್ಲಿ ಹುಟ್ಟುವ ಎಲ್ಲ ನಮೂನೆಯ ಬರೆಹಗಳು, ತಮ್ಮ ಸಂವೇದನೆಯ ಪ್ರಾಮಾಣಿಕತೆಯಿಂದ ಸಹಜತೆಯಿಂದ ಓದುಗರ ಎದೆತಾಕಿ ಸಂವಾದ ಮಾಡುವ ಸ್ಪಂದನಶೀಲ ಗುಣವನ್ನು ಪಡೆದಿರುತ್ತವೆ. ಹೀಗಾಗಿಯೇ ಸಾಧಾರಣ ಕವಿಗಳೂ ಮೃತ್ಯುವಿನ ಅಂಚಿನಲ್ಲಿ ತಲ್ಲಣಭಾವದಿಂದ ಧಗಧಗಿಸುವ ಕವಿತೆಗಳನ್ನು ಬರೆದಿರುವ ನಿದರ್ಶನಗಳಿವೆ. ಕಾಫ್ಕಾನ 'ರೂಪಾಂತರ', ಕಾಮೂನ 'ಪ್ಲೇಗ್', ಬ್ರಿಟಿಶರ ಆಳ್ವಿಕೆಯಲ್ಲಿದ್ದಾಗ ಬೇಂದ್ರೆಯವರ 'ನರಬಲಿ' ಕವಿತೆ, ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು'ಅಥವಾ ಟಿಪ್ಪು ಲಾವಣಿಗಳು ಹುಟ್ಟಿದ್ದು ಇಂತಹ ಅದಮನೀಯ ಒತ್ತಡಗಳಲ್ಲೇ. 'ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲೊ' ಎಂಬ ಚೀತ್ಕಾರ ಕೇಳಿಸುವಂತಿರುವ ಜನಪದ ತ್ರಿಪದಿಯೂ ಸನ್ನಿವೇಶದ ಕೂಸೇ ಆಗಿದೆ. ದರ್ವಿಶ್ ಮುಂತಾದ ಪ್ಯಾಲಸ್ತೈನೀ ಕವಿಗಳ ಕವಿತೆಗಳಲ್ಲಿ ತಮ್ಮ ಮನೆ-ತೋಟಗಳನ್ನು ಉಳಿಸಿಕೊಳ್ಳುವುದು ಜೀವನ್ಮರಣದ ಪ್ರಶ್ನೆಯನ್ನಾಗಿಸಿಕೊಂಡು ನಡೆಸುತ್ತಿರುವ ಸೆಣಸಾಟವು, ತುಂಬಿದ ಅಣೆಕಟ್ಟೆಯಿಂದ ರಭಸವಾಗಿ ಧುಮಿಕ್ಕುವ ಜಲದಂತೆ ಭಾವಾವೇಗದಲ್ಲಿ ಹೊಮ್ಮುವುದಕ್ಕೂ ಇದುವೇ ಕಾರಣ. ಕುಮಾರವ್ಯಾಸನಲ್ಲಿ ಬರುವ 'ಅರಸುರಾಕ್ಷಸ ಮಂತ್ರಿ ಮೊರೆವ ಹುಲಿ ಪರಿವಾರ ಹದ್ದಿನ ನೆರವಿ, ಬಡವರ ಬಿನ್ನಪವನಿನ್ನಾರು ಕೇಳುವರು' ಎಂಬ ಸಾಲುಗಳು, ರಾಜಧರ್ಮದ ನಿರ್ಲಿಪ್ತ ಬೋಧೆಯ ಭಾಗವಾಗಿ ಅಳವಡಿಕೆಯಾಗಿರುವುದು ದಿಟ. ಆದರೆ ಕವಿ ಅವನ್ನು ರಚಿಸುವಾಗ ತಾನು ಪಟ್ಟಿರುವ ಯಾವುದೊ ಆಳವಾದ ಸಂವೇದನೆಯನ್ನು ತುಂಬಿರಬಹುದು ಎಂಬಂತೆ ಅಲ್ಲಿ ವಿಷಾದವೂ ಮಡುಗಟ್ಟಿದೆ. ಎಂತಲೇ ಈ ಸಾಲುಗಳು ಬಿಕ್ಕಟ್ಟಿನಲ್ಲಿ ನಾಡು ಹಾಯುವಾಗೆಲ್ಲ ಬಳಕೆಗೊಳ್ಳುತ್ತ, ನಮಗಾಗೇ ಈಗ ರಚಿತವಾದವು ಎಂಬಂತೆ ಆವರ್ತನೆಗೊಳ್ಳುತ್ತಿವೆ. .

ಚಂಪಾ ಅವರು ಎಮರ್ಜನ್ಸಿಯ ಹೊತ್ತಲ್ಲಿ ಬರೆದ 'ಒಂದಾನೊಂದು ಕಾಲಕ್ಕೆ' ಕವನವು, ಮೇಲ್ಕಾಣಿಸಿದ ತಾತ್ವಿಕ ರಾಜಕಾರಣದ ಮತ್ತು ಕಾವ್ಯಮೀಮಾಸೆಯ ಚೌಕಟ್ಟಿನೊಳಗೇ ಹುಟ್ಟಿದೆ. ಇದೇನೂ ಕನ್ನಡದ ಶ್ರೇಷ್ಠ ಕವಿತೆಗಳ ಪಟ್ಟಿಯಲ್ಲಿ ಒಂದಾಗಿ ಪರಿಗಣಿತವಾಗಿಲ್ಲ. ಆದರೆ ಸರಳವಾದ ಸಾದಾಸೀದಾ ಪದ್ಯವಾಗಿರುವ ಇದರೊಳಗೆ ತುಂಬಿಕೊಂಡಿರುವ ದುಗುಡ ಮತ್ತು ಉತ್ಕಟತೆಗಳು, ಸ್ವಾತಂತ್ರ್ಯದ ಬೇಡಿಕೆಯ ಭಾವವನ್ನು ಹೃದಯದೊಳಗೆ ಹುಗಿಸಿ ಕಂಪನ ಹುಟ್ಟಿಸುವಷ್ಟು ತೀವ್ರವಾಗಿವೆ:

**ಒಂದಾನೊಂದು ಕಾಲಕ್ಕೆ, ಗೆಳೆಯರೆ**
**ಈ ಬಾನಿಗೆ ಅಂಚೆಂಬುದು ಇರಲಿಲ್ಲ.**
**ಈ ನೆಲಕ್ಕೆ ಗಡಿಯೆಂಬುದು ಇರಲಿಲ್ಲ.**
**ನೀವು ಕೂಗಿದ್ದೇ ಆಗ ಕಾವ್ಯವಾಗಿತ್ತು.**
**ಕೇಳುವವರಿರಲಿಲ್ಲ**
**ನೀವು ಹಿಡಿದದ್ದೇ ಆಗ ಹಾದಿಯಾಗಿತ್ತು**
**ತುಳಿಯುವವರಿರಲಿಲ್ಲ**
**ನಿಮ್ಮ ಬಾಯಿಗೆ ಈಗ ಬಟ್ಟೆ ತುರುಕಿದ್ದಾರೆ.**
**ನಿಮ್ಮ ಕಾಲಿಗೆ ಈಗ ಬೇಡಿ ಬಿಗಿದಿದ್ದಾರೆ**
**ನೀವೀಗ ಸ್ವಲ್ಪ ಝಾಡಿಸಿದರೆ ಕಾಲು,**
**ಬೇಡಿ ಹರಿಯಲಿಕ್ಕಿಲ್ಲ; ಆದರೆ**
**ಬಾನಲ್ಲಿ ಹಾಲುಹಾದಿ ಮೂಡುತ್ತದೆ.**
**ಮೌನ ಮುರಿಯಲು ಸ್ವಲ್ಪ ಹೆಣಗಿದರೆ ನೀವು**
**ಶಬ್ದ ಹೊರಡಲಿಕ್ಕಿಲ್ಲ; ಆದರೆ**
**ನೆಲವೇ ಎದೆ ಬಿರಿತು ಹಾಡುತ್ತದೆ.**

ಕವನವು 'ಒಂದಾನೊಂದು ಕಾಲಕ್ಕೆ' ಎಂಬ ಕಾಲಸೂಚಕ ಪದಗುಚ್ಛದ ಮೂಲಕ ಚರಿತ್ರೆಯಲ್ಲಿದ್ದ ಒಂದು ಸ್ವತಂತ್ರ ಅವಸ್ಥೆಯನ್ನು ಸೂಚಿಸುವ ಮೂಲಕ ಆರಂಭವಾಗುತ್ತದೆ.

(ಒಂದಾನೊಂದು ಪದದಲ್ಲಿ ನೊಂದು ಎಂಬುದಕ್ಕೆ ಒತ್ತುಕೊಟ್ಟರೆ ಬೇರೆಯೇ ಅರ್ಥ ಚಿಮ್ಮುತ್ತದೆ- ಅಕ್ಕನ 'ನಾನೊಂದ ಕನಸಕಂಡೆ' ಸಾಲಲ್ಲಿರುವಂತೆ.) ಹಿಂದೆ ಸ್ವಾತಂತ್ರ್ಯವನ್ನು ಗಡಿಯಿಲ್ಲದ ನೆಲ, ಅಂಚಿಲ್ಲದ ಬಾನು, ಕೂಗಿದರೂ ಕಾವ್ಯವಾಗುವ ಮತ್ತು ಹಿಡಿದಿದ್ದೇ ಹಾದಿಯಾಗುವಮುಕ್ತತೆಯಚಿತ್ರಗಳಮೂಲಕಮುಂದಿಡಲಾಗುತ್ತದೆ. ಆದರೆ ಲೋಕದ ಚರಿತ್ರೆ ಬಲ್ಲವರಿಗೆ ತಿಳಿದಿದೆ, ಎಲ್ಲ ಕಾಲಕ್ಕೂ ಸ್ವಾತಂತ್ರ್ಯ ಕಸಿದುಕೊಳ್ಳುವ ಶಕ್ತಿಗಳಿದ್ದವು. ಅವುಗಳ ವಿರುದ್ಧ ದನಿಯೆತ್ತಿ ಸತ್ತವರೂ ಗೆದ್ದವರೂ ಕೂಡ ಇದ್ದರು. ಸ್ವಾತಂತ್ರ್ಯಹರಣ ಮತ್ತು ಅದನ್ನು ಪಡೆಯುವುದಕ್ಕೆ ಮಾಡುವ ಸಂಘರ್ಷ, ಅದಕ್ಕಾಗಿ ಸಿಕ್ಕ ಮರಣ-ಗೆಲುವುಗಳು ನಿರಂತರವಾಗಿವೆ. ಆದರೆ ಗತದಲ್ಲಿ ಅನಿರ್ಬಂಧಿತವಾದ ಸ್ವಾತಂತ್ರ್ಯವಿತ್ತು ಎಂದು ಕವಿತೆ ಪ್ರಕೃತಿಯ ಚಿತ್ರಗಳ ಮೂಲಕ ತುಸು ಉತ್ಪ್ರೇಕ್ಷೆಯಲ್ಲಿ ಹೇಳುತ್ತಿರುವುದು ವರ್ತಮಾನದಲ್ಲಿ ಅದಿಲ್ಲ ಎಂದು ವಾಸ್ತವವನ್ನು ಸೂಚಿಸಲು; ಉತ್ಪ್ರೇಕ್ಷಿತ ಚರಿತ್ರೆಯ ನೆನಪು ಜಡವಾದ ವರ್ತಮಾನದಲ್ಲಿ ಕ್ರಿಯಾಶೀಲತೆ ಹುಟ್ಟಿಸಲಿ ಎಂದು ಪ್ರೇರಿಸಲು. ಇಲ್ಲಿ ಕವಿಯು ಜನತೆಯ ನಾಯಕನಾಗಿದ್ದಾನೆ. ಹೀಗಾಗಿ ಜನರ ಸ್ವಾತಂತ್ರ್ಯ ಮತ್ತು ಅವನ ಸ್ವಾತಂತ್ರ್ಯಗಳೆರಡೂ ಇಲ್ಲಿ ಏಕೀಭವಿಸಿವೆ.

ಎರಡನೇ ಚಿಕ್ಕದಾದ ಪದ್ಯಖಂಡವು ವರ್ತಮಾನದಲ್ಲಿ ಈ ಸ್ವಾತಂತ್ರ್ಯಗಳು ಕಸಿಯಲ್ಪಟ್ಟ ದಾರುಣ ಸನ್ನಿವೇಶದ ಚಿತ್ರವನ್ನು ಮುಂದಿಡುತ್ತದೆ. ಆದರೆ ಈ ಬಂಧನದ ದಾರುಣತೆ ಖಾಯಮ್ಮೇನಲ್ಲ. ನಿವಾರಿಸಬಹುದು. ಇದಕ್ಕಾಗಿ ದಂಗೆ ಚಳುವಳಿ ಹೋರಾಟ ಮುಂತಾದ ಮಹತ್ವಾಕಾಂಕ್ಷೆಯ ಭಾರವಾದ ಪ್ರಯತ್ನಗಳನ್ನು ಕವಿತೆ ಮುಂದಿಡುತ್ತಿಲ್ಲ. ಬದಲಾಗಿ 'ಸ್ವಲ್ಪ ಕಾಲು ಝಾಡಿಸಲು' 'ಮೌನ ಮುರಿಯಲು' 'ಸ್ವಲ್ಪ ಹೆಣಗಲು' ಸೂಚಿಸುತ್ತದೆ. ವ್ಯಕ್ತಿಗಳು ತಮ್ಮ ಪರಿಮಿತಿಯಲ್ಲೇ ಮಾಡುವ ಇಂತಹ ಸಣ್ಣಪುಟ್ಟ ಮಿಸುಗಾಟದಿಂದ ಇಡೀ ವ್ಯವಸ್ಥೆಯನ್ನು ಪಲ್ಲಟಿಸುವ ಮಹಾಕ್ರಾಂತಿ ಸಂಭವಿಸಿದೆ ಹೋಗಬಹುದು. ಆದರೆ ಅಂತಹ ಅದಕ್ಕೆ ಬೇಕಾದ ನಡಿಗೆಯಂತೂ ಶುರುವಾಗುತ್ತದೆ. ಸಂಪೂರ್ಣ ಸ್ವಾತಂತ್ರ್ಯವು ನಾಡಿನ ಸಮುದಾಯವು ಪ್ರಜ್ಞೆ ಮತ್ತು ಪ್ರತಿರೋಧ ಗುಣವನ್ನು ಪಡೆದುಕೊಂಡು ಕೆಟ್ಟ ವ್ಯವಸ್ಥೆಯ ವಿರುದ್ಧ ಸಂಘಟಿತ ದನಿಯೆತ್ತಿದಾಗ ಮಾತ್ರ ಸಾಧ್ಯ. ಅದು ಸದ್ಯಕ್ಕೆ ತಕ್ಷಣ ಸಾಧ್ಯವಾಗುವ ಸನ್ನಿವೇಶವಿಲ್ಲ. ಆದರೆ ಅದುವೇ ನಿಷ್ಕ್ರಿಯತೆಗೂ ಕಾರಣವಾಬೇಕಿಲ್ಲ. ಬದಲಾವಣೆ ಎಂಬ ದೀರ್ಘ ಯಾನವು ಸಣ್ಣಹೆಜ್ಜೆಗಳ ಮೂಲಕವೇ ಆರಂಭವಾಗುತ್ತದೆ. ಅಂತಹ ಮಿಸುಕಾಟ ಮಾಡಿದರೆ ಪರಿಣಾಮ ಹಾಲಹಾದಿ ಮೂಡುತ್ತದೆ; ನೆಲವೇ ಎದೆಬಿರಿತು ಹಾಡುತ್ತದೆ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ನಿರ್ದಿಷ್ಟ ಹಾಡಿನ ಭಾವವು ಮನುಕುಲವು ಮತ್ತೆಮತ್ತೆ ಎದುರಿಸುವ ಸಮಸ್ಯೆಯನ್ನು ಕುರಿತು ಇದ್ದಾಗ, ಅದು ನಾನಾ ವಿನ್ಯಾಸದಲ್ಲಿ ಬೇರೆಬೇರೆ ಭಾಷೆಯಲ್ಲಿ ಎಲ್ಲ ಕಾಲಘಟ್ಟದಲ್ಲೂ ಪುನರಾವರ್ತನೆ ಆಗುತ್ತಲೇ ಇರುತ್ತದೆ. ದುಷ್ಟ ಸರ್ವಾಧಿಕಾರಗಳ ಅಡಿಯಲ್ಲಿ ಉಸಿರುಗಟ್ಟುವ ಸನ್ನಿವೇಶದಲ್ಲಿ ಬದುಕುವ ಎಲ್ಲ ಸಮಾಜಗಳು, ತಮ್ಮ ಎದೆಯ ದನಿಯೆಂದೇ ಹಾಡಿಕೊಳ್ಳುವಷ್ಟು ಈ ಕವಿತೆ ಸಾಧಾರಣೀಕರಣವನ್ನು ಪಡೆದಿದೆ. ಹೀಗಾಗಿಯೇ ಇದರ ಭಾವವು ಗಂಡಾಳಿಕೆ ಸಮಾಜದಲ್ಲಿರುವ ವಿವಾಹ ಮತ್ತು ಕುಟುಂಬ ಮುಂತಾದ ವ್ಯವಸ್ಥೆಗಳಲ್ಲಿ ನಲುಗುತ್ತಿರುವ ಸ್ತ್ರೀಯರ ದನಿಯಾಗುವಂತಿದೆ; ಕನ್ನಡದ ಮಹಿಳಾ ಸಂವೇದನೆಯ ಕಾವ್ಯದಲ್ಲಿ ಇದರ ಪ್ರತಿಬಿಂಬಗಳನ್ನು ಕಾಣಬಹುದು; ಜೆಎನ್ಯು ವಿದ್ಯಾರ್ಥಿಗಳು ಕೂಗಿದ ಆಜಾದಿ ಘೋಷಣೆಯಲ್ಲಿ ಇದು ಅನುರಣನಗೊಂಡಿತು; ಈಗಲೂ ಟರ್ಕಿಯ ಕುರ್ದಿಶರ, ಇಸ್ರೇಲಿನ ಜಿಯೊನಿಸ್ಟರ ಆಕ್ರಮಣಕ್ಕೆ ಸಿಲುಕಿರುವ ಪ್ಯಾಲಸ್ತೇನಿಯ

ರ, ಚೀನಾದ ಪಾದದಡಿ ಅಪ್ಪಚ್ಚಿಯಾಗಿರುವ ವುಗೈರ್ ಮುಸ್ಲಿಮರ ಹಾಗೂ ಟಿಬೆಟಿಯನ್ ಬೌದ್ಧರ, ಬರ್ಮಾದ ರೋಹಿಂಗ್ಯಾಗಳ, ಆಫಘಾನಿಸ್ಥಾನದ ಮಹಿಳೆಯರ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಎದೆಯೊಳಗೆ ಈ ಕವನ ಹಲವಾರು ವಿನ್ಯಾಸಗಳಲ್ಲಿ ರೂಪುಗೊಳ್ಳುತ್ತಿರಬಹುದು.

ಬಾಬಾ ಸಾಹೇಬರು ಧಮ್ಮ ಸ್ವೀಕಾರ ಮಾಡುವ ಮುನ್ನ ಇದೇ ಭಾವವುಳ್ಳ ಮಾತುಗಳನ್ನು ಆಡಿದರು ಮತ್ತು ಬರೆದರು. ಸಾರಾ ಅಬೂಬಕರ್ ಅವರ ಕಥನದ ನಾಯಕಿಯರಲ್ಲಿ ಈ ಪದ್ಯವು ಬೇರೆ ಧಾಟಿಲಯದಲ್ಲಿ ಕಟ್ಟಲ್ಪಟ್ಟಿದೆ. ಸಿದ್ಧಲಿಂಗಯ್ಯನವರ 'ಎಲ್ಲಿಗೆ ಬಂತು ಯಾರಿಗೆ ಬಂತು ಸ್ವಾತಂತ್ರ್ಯ' ಕವನದಲ್ಲಿ ಈ ಹಾಡಿನ ಭಾವವು ಹೋರಾಟದ ಮೊದಲು ಹುಟ್ಟುವ ಸಹಜವಾದ ಕಟುಪ್ರಶ್ನೆಯಂತೆ ಕೇಳಲ್ಪಟ್ಟಿದೆ. ಶತಮಾನದ ಹಿಂದೆ ರವೀಂದ್ರನಾಥ ಟಾಗೂರರು ಗೀತಾಂಜಲಿ ಸಂಕಲನದಲ್ಲಿ ಸೇರಿಸಿದ 'ವೇರ್ ದಿ ಮೈಂಡ್ ಈಸ್' ಎಂಬ ಗೀತೆಯಲ್ಲಿ ಈ ಕವನದ ಭಾವವು ದೇಶಕಟ್ಟುವ ತತ್ವವಾಗಿ ಈಗಾಗಲೇ ಹೇಳಲ್ಪಟ್ಟಿದೆ. 'ಆನುಒಲಿದಂತೆ ಹಾಡುವ' ಎಂಬ ಬಸವಣ್ಣನವರ ವಚನ, ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಲೇಖನ ಈ ಪದ್ಯದ ಮೂಲಮಾತೃಕೆಗಳಾಗಿದ್ದರೆ ಆಶ್ಚರ್ಯವಿಲ್ಲ.

ಎಲ್ಲ ದಮನಿತ ಸಮಾಜ ಕುಟುಂಬ ಧರ್ಮ ದೇಶಗಳಲ್ಲಿ ಬದುಕುವ ಪ್ರಜ್ಞಾವಂತರಿಗೂ, ಸಂವೇದನಶೀಲರಿಗೆ ಸ್ವಾತಂತ್ರ್ಯ ಬಯಸುವವರಿಗೂ, ಈ ಕವನ ತಮ್ಮದೇ ಸ್ವಾತಂತ್ರ್ಯದ ಅಭೀಪ್ಸೆಯ ಹಾಡೆನಿಸುತ್ತದೆ. ಈಗ ತಾಲಿಬಾನಿಗಳ ಕೋವಿಗೈಯಲ್ಲಿ ಸಿಲುಕಿರುವ ಆಫಘಾನಿಸ್ಥಾನದ ಮಹಿಳೆಯರು ಮತ್ತು ಕಲಾವಿದರು ಇಂತಹ ಗೀತೆಗಳನ್ನು ಒಳಗೇ ಹಾಡುತ್ತಿರಬಹುದು. ನಿರ್ದಿಷ್ಟ ಲಿಂಗ, ಜಾತಿ, ಧರ್ಮಗಳಲ್ಲಿ ಹುಟ್ಟಿದ ಕಾರಣಕ್ಕೇ ಈಗ ಇಂಡಿಯಾದ ಬೀದಿಹಾದಿಗಳಲ್ಲಿ ಬಡಿಸಿಕೊಂಡು ಸಾಯುತ್ತಿರುವ ಮಹಿಳೆಯರೂ ದಲಿತರೂ ಮುಸ್ಲಿಮರೂ ಕ್ರೈಸ್ತರೂ ಆದಿವಾಸಿಗಳೂ ಇಂತಹ ಹಾಡನ್ನು ಒಳಗೇ ಹಾಡಬಹುದು. ನಾಡಿನ ಇಕ್ಕಟ್ಟಿನ ಗಳಿಗೆಗಳಲ್ಲಿ ಚಂಪಾ, ನಮ್ಮ ಆತ್ಮಗಳಿಗೆ ಹತ್ತಿದ ತುಕ್ಕನ್ನು ತೆಗೆದು ಅರದಲ್ಲಿ ಉಜ್ಜಿ ಝಗಝಗಿಸುವ ಕತ್ತಿಯಾಗಿಸಬಲ್ಲ ಇಂತಹ ಕವನಗಳನ್ನು, ಯಾವುದೇ ಶ್ರೇಷ್ಠತೆಯ ಮಹತ್ವಾಕಾಂಕ್ಷೆಯಿಲ್ಲದೆ ಸಹಜ ತುಡಿತದಲ್ಲಿ ಬರೆದರೆಂಬುದೇ, ಅವರ ಚಾರಿತ್ರಿಕ ಮಹತ್ವವನ್ನು ಸಾಬೀತುಗೊಳಿಸುವ ಸಂಗತಿ.

# ಗ್ರಾಮ ಪಂಚಾಯತಿಗಳಲ್ಲಿ ಮತದಾನ ಜಾಗೃತಿ

## ಕುಷ್ಟಗಿ ತಾಲೂಕ ಆರ್‌ಡಿಪಿಆರ್ ನೌಕರರು ಹಾಗೂ ಸಿಬ್ಬಂದಿ ರವರಿಂದ ಮತದಾನ ಜಾಗೃತಿಗಾಗಿ ಬೈಕ್ ರ್‍ಯಾಲಿ

■ **ಹಂಪಿ ಟೈಮ್ಸ್ ಕೊಪ್ಪಳ**

ಲೋಕಸಭಾ ಚುನಾವಣೆ-2024 ರ ಅಂಗವಾಗಿ ಮತದಾನ ಜಾಗೃತಿಗಾಗಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಬುಧವಾರದಂದು ಕುಷ್ಟಗಿ ಪಟ್ಟಣ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಹಮ್ಮಿಕೊಂಡಿದ್ದ ಬೈಕ್ ರ್‍ಯಾಲಿ ಜಾಗೃತಿ ಕಾರ್ಯಕ್ರಮಕ್ಕೆ ತಾಲೂಕ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ನಿಂಗಪ್ಪ ಎಸ್. ಮಸಳಿ ರವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಚುನಾವಣೆಯನ್ನು ಎಲ್ಲರೂ ಹಬ್ಬದಂತೆ ಆಚರಿಸಬೇಕು. ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕೆಂಬ ಉದ್ದೇಶದಿಂದ ವಿನೂತನವಾಗಿ ಸ್ವೀಪ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಇಂದು ಕುಷ್ಟಗಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹಾಗೂ ನೀಡಶೇಸಿ, ಮಾರ್ಗವಾಗಿ ತಳುವಗೇರ ಗ್ರಾಮ ಪಂಚಾಯತಿಗಳಲ್ಲಿ ಈ ಒಂದು ಬೃಹತ್ ಬೈಕ್ ರ್‍ಯಾಲಿ ಮೂಲಕ ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದರು.





ತಾಲೂಕು ಪಂಚಾಯತ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ರ್‍ಯಾಲಿಯಲ್ಲಿ ಭಾಗವಹಿಸಿದ್ದು, ಇದೇ ರೀತಿ ಎಲ್ಲರೂ ಮತದಾನ ಮಾಡುವ ಮೂಲಕ ತಾಲೂಕಿನಲ್ಲಿ ಶೇ.100 ರಷ್ಟು ಮತದಾನ ನಡೆಯುವಂತೆ ಸಹಕರಿಸಿ ಎಂದು ಮನವಿ ಮಾಡಿದರು.

ಬೈಕ್ ರ್‍ಯಾಲಿ: ಜಾಗೃತಿ ವಾಹಿನಿ ಜಾಥಾ

ಕುಷ್ಟಗಿ ಪಟ್ಟಣದ ಮಲಯ್ಯ ಸರ್ಕಲ್, ಮಹಾವೀರ್ ಸರ್ಕಲ್ , ಮಾರುತಿ ಸರ್ಕಲ್, ಅಂಬೇಡ್ಕರ್ ಸರ್ಕಲ್, ತಹಸೀಲ್ದಾರ್ ಕಚೇರಿ ಮಾರ್ಗವಾಗಿ ಆರಂಭವಾದ ಬೈಕ್ ರ್‍ಯಾಲಿಯು ನೀಡಶೇಸಿ ಮಾರ್ಗವಾಗಿ ತಳುವಗೇರ ಗ್ರಾಮದಲ್ಲಿ ಅಂತ್ಯಗೊಂಡಿತು.

ಮತದಾನ ಜಾಗೃತಿ ಹೆಂಡ್ ಔಟ್ಸ್ ಗಳನ್ನು ಹಿಡಿದುಕೊಂಡು ಜಾಥಾ ಉದ್ದಕ್ಕೂ ಮತದಾನದ ಮಹತ್ವವನ್ನು ಸಾರುವ ಜಿಂಗಲ್ಸ್ ಗಳನ್ನು ಸಹ ಪ್ರಸಾರ ಮಾಡುವ ಮೂಲಕ, 100 ಕ್ಕೂ ಹೆಚ್ಚು ದ್ವಿ ಚಕ್ರ ವಾಹನಗಳ ಮೂಲಕ ಅರಿವು ಮೂಡಿಸಲಾಯಿತು.

ಪ್ರತಿಜ್ಞಾವಿಧಿ ಬೋಧನೆ:

ತಳುವಗೇರ ಗ್ರಾಮದ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ನಿಂಗಪ್ಪ ಮೂಲಿಮನಿ ರವರು ಪ್ರತಿಜ್ಞಾವಿಧಿ ಬೋಧಿಸುವ ಮೂಲಕ ಜನರಿಗೆ ಮತದಾನ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ(ಗ್ರಾ.ಉ) ನಿಂಗನಗೌಡ ವಿ.ಹೆಚ್., ತಾಲೂಕ ಮಟ್ಟದ ವಿವಿಧ ಇಲಾಖೆಯ ಅಧಿಕಾರಿ ವರ್ಗ ಸೇರಿದಂತೆ ತಾಲ್ಲೂಕು ಪಂಚಾಯತ್ ಸಿಬ್ಬಂದಿಗಳು, ತಾಲೂಕಿನ ಎಲ್ಲಾ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಕರ ವಸೂಲಿಗಾರರು ಡಿಇಓ ರವರು, ಸಿಬ್ಬಂದಿ ಹಾಗೂ ಇತರರು ಹಾಜರಿದ್ದರು.

ಕವಿ ಮನಸು

## ಬಣ್ಣದ ಮುಖವಾಡ



ಹಾಕಿದರೆಲ್ಲರೂ ಒಂದೊಂದು ಮುಖವಾಡ
ತೆಗೆದಿಟ್ಟಾಗ ಕಾಣುವುದು ನೈಜತೆ ನೋಡಾ
ಒಳಗ ಇರುವುದು ಅವರ ದುಃಖ ಬೀಡಾ
ನೋವಿದ್ದರೂ ತೋರಿಸದ ಮುಖವಾಡ

ಮುಖವಾಡದಲ್ಲೂ ತೋರುವರು
ವೈವಿಧ್ಯತೆ
ಒಳಗಿನದಕು ಹೊರಗಿನದಕು ವೈರುದ್ಧತೆ
ನಗು ನಗುತ ಮಾತನಾಡಿ ಮನ ಸೆಳೆವರು
ತಮ್ಮ ಸ್ವಾರ್ಥಕ್ಕೆ ಪರರ ಬಲಿಗೈವರು

ಬಣ್ಣದ ಮುಖವಾಡ ಸುಣ್ಣಕ್ಕೆ ಎರವಾಗಿ
ಕಳೆದುಕೊಂಡಿತಲ್ಲ ನೈಜತೆಗೆ ಬರವಾಗಿ
ಯಾವ ಪುರುಷಾರ್ಥಕ್ಕೋ ಈ ಬದುಕು
ಸುತ್ತಲಿನ ಪರಿಸರ ನೋಡಿ ನರ ಕಲಿಬೇಕು

ಅವರಿವರ ಮುಖಗಳ ಗೊಡವೆ ಬೇಡ
ತಿಳಿಯದಲೇ ಅಂತರಂಗದ ಮುಖವಾಡ
ಯೋಚಿಸಿ ಹೆಜ್ಜೆ ಇಡೆ ಹಲವಾರು ಬಾರಿ
ಸುಗಮವು ನೀ ನಡೆವ ಬದುಕಿನ ದಾರಿ

ಅವರಿವರ ನೋಡಿ ಬದುಕುವುದು ಬೇಡ
ನಮ್ಮಿಷ್ಟಕ್ಕೆ ನೀವು ಬದುಕೆ ಚೆಂದ ನೋಡ
ನೆರೆ ಹೊರೆಯ ಅನುಕರಣೆ ಮಾಡ
ಹೋದವ
ತನ್ನನ್ನೇ ತಾನಿರುಕಿಗೆ ಸಿಗಿಸಿ ಮರೆತ
ತನ್ನತನವ

– ಕೆ ಎಂ ಬಸವರಾಜ
ಹೊಸಪೇಟೆ

## ನೀರಿಗಾಗಿ ಕದನ



ಕುಡಿಯುವ ನೀರಿಗೆ ಜಡೆಗಳ ಜಗಳವು
ನಡೆದಿಹ ಜಾಗವು ಗದಗ
ಕೊಡಗಳ ಕರದಲಿ ಹಿಡಿಯುತ ಬಂದರು
ಗಡಿಬಿಡಿಯಲ್ಲಿದೆ ಬಳಗ

ಸಿಡುಕುತ ವೃದ್ಧೆಗೆ ಕೆಡುಕನು ತರುತಿರೆ
ತಡೆಯುವ ಸುಂದರ ಮನದಿ
ಬಿಡಿಸಲು ಬಂದವ ನಡುವಲಿ ಸಿಲುಕಿದ
ಕಡೆಗವನೋಡಿದ ಭಯದಿ

ಯಾರದು ತಪ್ಪಿದೆ ಯಾರದು ಸರಿಯಿದೆ
ಯಾರನು ಕೇಳುವುದಿಲ್ಲಿ
ಸೇರಿದ ಮಂದಿಯು ನಾರಿಯರೊಂದಿಗೆ
ಕೋರಲು ಕಾದದೆ ನಿಲ್ಲಿ

ಛಲದಲಿ ಕಾದಲು ಬಲವದು ಕುಂದಿತು
ನಿಲುಗಡೆ ಕದನಕೆ ಹಾಡಿ
ಕಲಹವು ಮುಗಿಯಲು ಚಲಿಸಿತು ಬೇರೆಡೆ
ಜಲವನು ತುಂಬಿದ ಗಾಡಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಒದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

### ಹನುಮ ಜಯಂತಿ

# ಹನುಮನ ಯಶೋಗಾಥೆ ಸಾರುವ... ಸುಂದರಕಾಂಡದ ಪಕ್ಷಿ ನೋಟ

**ಅಂಜನಾ ನಂದನಂ ವೀರಂ**
**ಜಾನಕೀಶೋಕ ನಾಶನಂ**
**ಕಪೀಶ ಮಕ್ಷ ಹಂತಾರ**
**ವಂದೇ ಲಂಕಾ ಭಯಂಕರಮ್**

ಅಂಜನಿ ದೇವಿ ಮತ್ತು ವಾಯು ದೇವರ ಪುತ್ರ ಆಂಜನೇಯನು ಚೈತ್ರ ಶುದ್ಧ ಪೂರ್ಣಿಮೆಯ ದಿನ ಜನಿಸಿದನು. ಆಂಜನೇಯನ ಜೀವನವೇ ಒಂದು ಯಶೋಗಾಥೆ. ಮಹಾವೀರನಾದರೂ ವಿನಯಶೀಲ, ಅಷ್ಟಸಿದ್ದಿಗಳನ್ನು ಗಳಿಸಿದಾತ, ಬಲವಾನ, ರಾಮ ದೇವರ ಭಕ್ತ ರಾಮಭಂಟ ಹನುಮ. ಎಲ್ಲಿ ರಾಮನಿರುವನೋ ಅಲ್ಲೇ ಹನುಮನು ಎಲ್ಲಿ ಹನುಮನಿರುವನೋ ಅಲ್ಲೇ ರಾಮನು. ರಾಮನೆಡೆಗಿನ ಆಂಜನೇಯನ ಭಕ್ತಿ, ಶ್ರದ್ಧೆ, ನಂಬಿಕೆ ಅನನ್ಯ ಮತ್ತು ಅದ್ವಿತೀಯ.

ಶನಿವಾರದ ದಿನ ಪ್ರತಿ ಸಣ್ಣ ಹಳ್ಳಿಯಿಂದ ಹಿಡಿದು ಪಟ್ಟಣ, ನಗರ, ಮಹಾನಗರಗಳಲ್ಲಿ ಆಂಜನೇಯನನ್ನು ಪೂಜಿಸುತ್ತಾರೆ. ಹಳ್ಳಿಗಳಲ್ಲಂತೂ ಮುಂಜಾನೆ ಸ್ನಾನ ಮಾಡಿದ ಮಕ್ಕಳು, ಹಿರಿಯರು ಒಂದು ಪುಟ್ಟ ಲೋಟದಲ್ಲಿ ಕೊಂಚಎಣ್ಣೆಯನ್ನು, ಅದರಲ್ಲಿ ಬತ್ತಿಯನ್ನು ಹಾಕಿಕೊಂಡು ಎರಡು ಊದಿನ ಕಡ್ಡಿ ಕೈಯಲ್ಲಿ ಹಿಡಿದು ಹನುಮನ ಗುಡಿಗೆ ನಡೆಯುತ್ತಾರೆ. ಎಲ್ಲರಿಗೂ ಹನುಮನೆಂದರೆ ಅಷ್ಟು ಭಕ್ತಿ.... ತಮ್ಮನ್ನು ಕಾಡುವ ಎಲ್ಲಾ ರೀತಿಯ ದುಷ್ಟ ಗ್ರಹಗಳಿಂದ ವ್ಯಾಧಿಗಳಿಂದ ಹನುಮ ರಕ್ಷಿಸುತ್ತಾನೆ ಎಂಬ ಧೈರ್ಯ. ದೇವರಾದ ಶ್ರೀರಾಮಚಂದ್ರನೇ ಹನುಮನನ್ನು ನಂಬುವನೆಂದರೆ ನಾವು ಸಾಮಾನ್ಯ ಜನರು ನಂಬದಿರುತ್ತೇವೆಯೇ!!

ಆಂಜನೇಯನ ಯಶೋಗಾಥೆಯನ್ನು ಕುರಿತು ವಾಲ್ಮೀಕಿಯು ತನ್ನ ರಾಮಾಯಣ ಮಹಾಕಾವ್ಯದಲ್ಲಿ "ಸುಂದರಕಾಂಡ" ಎಂಬ ಒಂದು ವಿಶೇಷ ಅಧ್ಯಾಯವನ್ನೇ ಬರೆದಿದ್ದಾನೆ. ವಾನರಸೇನೆಯ ನಾಯಕನಾದ ಸುಗ್ರೀವನನ್ನು ಶ್ರೀರಾಮಚಂದ್ರನು ಭೇಟಿಯಾದ ನಂತರ ವಾಲಿಯನ್ನು ವಧಿಸಿ ಸುಗ್ರೀವನಿಗೆ ರಾಜನಾಗಿ ಪಟ್ಟ ಕಟ್ಟಿದನು. ತದ ನಂತರ ಸೀತೆಯನ್ನು ಹುಡುಕಲು ನಾಲ್ಕು ದಿಕ್ಕುಗಳಿಗೆ ದೂತರನ್ನು ಕಳುಹಿಸಿದರು. ಹೀಗೆ ಕಳುಹಿಸಲ್ಪಟ್ಟವರಲ್ಲಿ ಆಂಜನೇಯನು ಒಬ್ಬ.... ಸೀತೆಯನ್ನು ರಾವಣನು ಕೊಂಡೊಯ್ಯುವಾಗ ರಾವಣನೊಂದಿಗೆ ಹೋರಾಡಿ ಮೃತಪಟ್ಟ ಪಕ್ಷಿ ಜಟಾಯುವಿನ ಸೋದರ ಸಂಪಾತಿಯಿಂದ ಸೀತೆಯು ಅಪಹರಿಸಲ್ಪಟ್ಟು ಸ್ವರ್ಣ ಲಂಕೆಯಲ್ಲಿ ಬಂಧಿಯಾಗಿರಬಹುದು ಎಂಬ ಆಧಾರದ ಮೇಲೆ ರಾಮ ತನ್ನ ನಂಬುಗೆಯ ಭಂಟ ಹನುಮನ ಕೈಯಲ್ಲಿ ಮುದ್ರೆಯುಂಗುರವನ್ನು ಕೊಟ್ಟು ಕಳುಹಿಸಿದನು.

ಚಿಕ್ಕವನಿದ್ದಾಗ ತನ್ನ ಅಸಾಧ್ಯ ತುಂಟತನದಿಂದ ವಿಪರೀತ ಕೀಟಲೆಗಳನ್ನು ಮಾಡುತ್ತಿದ್ದ ಹನುಮನು ತನ್ನ ಶಕ್ತಿ ಸಾಮರ್ಥ್ಯಗಳನ್ನು ಮರೆಯುವಂತಹ ಶಾಪವನ್ನು ಪಡೆದಿದ್ದನು. ಇದೀಗ ಆತನ ಸ್ನೇಹಿತ ಜಾಂಬವಂತನು ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿ ಸ್ವರ್ಣ ಲಂಕೆಗೆ ಹೋಗಲು ಬೇಕಾಗುವ ಸಾಮರ್ಥ್ಯವನ್ನು ತಮ್ಮ ಗುಂಪಿನಲ್ಲಿ ಕೇವಲ ಹನುಮ ಪಡೆದಿದ್ದಾನೆ ಎಂದು ಹನುಮನಿಗೆ ನೆನಪಿಸಿದ. ತನ್ನೆಲ್ಲಾ ನೆನಪುಗಳನ್ನು, ಶಕ್ತಿಯನ್ನು ಮತ್ತೆ ಪಡೆದ ಹನುಮನು ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿ ಸ್ವರ್ಣ ಲಂಕೆಯಲ್ಲಿ ಕಾಲಿಟ್ಟನು. ಹನುಮನು ಶಕ್ತಿಶಾಲಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಹನುಮನು ನಿರ್ಭೀತನು ಹೌದು. ಸಮುದ್ರವನ್ನು ದಾಟುವಾಗ ಮಾರ್ಗ ಪದ್ಯದಲ್ಲಿ ಆತನಿಗೆ ಲಂಕಿಣಿ, ಸಿ0ಹಿಣಿ ಎಂಬ ರಾಕ್ಷಸರನ್ನು ಎದುರಿಸಿ ಹತಗೊಳಿಸಿದನು. ಆತ್ಮವಿಶ್ವಾಸಕ್ಕೆ ಇನ್ನೊಂದು ಹೆಸರು ಈ ಪವನಸುತ. ಒಂದೇ ಒಂದು ಕ್ಷಣವು ಗಲಿಬಿಲಿಗೊಳ್ಳದೆ, ಹೆಸರು ಕೇಳಿದ ಇಂದ್ರಾದಿ ದೇವತೆಗಳೇ ಹೆದರಿ ನಡುಗುತ್ತಿದ್ದ ರಾಕ್ಷಸೇಂದ್ರ ರಾವಣನನ್ನು ತಾನು ಭೇಟಿಯಾಗಲು ಅಪಾರ ಆತ್ಮವಿಶ್ವಾಸವನ್ನು ಹೊಂದಿದ್ದ ಹನುಮಂತ ಸಮುದ್ರವನ್ನು ಹಾರಿ ಆಚೆಯ ದಡದಲ್ಲಿದ್ದ ಸ್ವರ್ಣ ಲಂಕೆಯ ಅಶೋಕವನದಲ್ಲಿ ಹೆದರಿದ ಆದರೆ ನಿಶ್ಚಲವಾಗಿ ಕುಳಿತ ಸೀತೆಯೊಂದಿಗೆ ಆರ್ಭಟಿಸುತ್ತಾ ಮಾತನಾಡುತ್ತಿದ್ದ ರಾವಣನನ್ನು ಕಂಡನು. ರಾವಣನ ನಿರ್ಗಮನದ ನಂತರ ಸೀತಾಮಾತೆ ತನ್ನನ್ನು ರಾವಣನ ಮಾಯಾ ರೂಪ ಎಂದು ಅನುಮಾನಿಸಬಹುದು ಎಂಬ ಶಂಕೆಯಿಂದ ಆಕೆಗೆ ತುಸುದೂರದಲ್ಲಿ ಕುಳಿತು ಮೆಲುದನಿಯಲ್ಲಿ ರಾಮಕಥೆಯನ್ನು ಹೇಳಲಾರಂಭಿಸಿದ. ಎಲ್ಲ ಕಥೆಯನ್ನು ಹೇಳಿದ ನಂತರ ನಿಧಾನವಾಗಿ ವಿನೀತ ಭಾವದಿಂದ ಸೀತಾಮಾತೆಯ ಮುಂದೆ ಕೈಮುಗಿದು ನಿಂತನು. ರಾಮನು ತನ್ನ ದೂತನ ಮುಖಾಂತರ ಸೀತಾಮಾತೆಗೆ ಕೊಟ್ಟ ಮುದ್ರೆಯುಂಗುರವನ್ನು ಆಕೆಗೆ ನೀಡಿ ಆಕೆಯ ಯೋಗ ಕ್ಷೇಮವನ್ನು ವಿಚಾರಿಸಿದನು. ಆಕೆಯ ಕ್ಷೇಮದ ಕುರಿತು ಪ್ರಭು ಶ್ರೀ ರಾಮನ ಕಳವಳವನ್ನು ವಿವರವಾಗಿ ವಿಷದ ಪಡಿಸಿದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper





ಸೀತಾಮಾತೆಯು ಅಪ್ಪಣೆ ನೀಡಿದರೆ ತಾನು ಆಕೆಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡೊಯ್ಯಬಲ್ಲೆ ಎಂದು ಆಕೆಗೆ ಮನವರಿಕೆ ಮಾಡಿಕೊಟ್ಟನು. ಆದರೆ ಸೀತಾಮಾತೆಯ ಇಚ್ಛೆಯಂತೆ ಪ್ರಭು ಶ್ರೀ ರಾಮನೇ ಆಕೆಯನ್ನು ರಾವಣನ ಕೈಯಿಂದ ಬಿಡಿಸಿಕೊಂಡು ಹೋಗಲಿ ಎಂಬ ನಿಸ್ವಾರ್ಥ ಮನೋಭಾವ ಹನುಮನದು. ಆತ ತನ್ನನ್ನು ತಾನು ರಾಮದೂತ, ರಾಮ ಭಂಟ ಎಂದು ಹೇಳಿಕೊಂಡನಲ್ಲದೆ ತಾನೋರ್ವ ಶೂರ,ವೀರ ಕಲಿ ಎಂದು ಹೇಳಿಕೊಳ್ಳಲಿಲ್ಲ. ತುಂಬಾ ನಿಷ್ಠೆ, ಸ0ಯಮದಿಂದ ಆತ ನಡೆದುಕೊಂಡನು. ತಾಯಿಯ ಮುಂದೆ ಮಗ ಹೇಗೆ ಇರುತ್ತಾನೆಯೋ ಹಾಗೆಯೇ ವಿನಯ, ವಿಧೇಯತೆ ಮತ್ತು ಪ್ರಭು ಶ್ರೀ ರಾಮನೆಡಗಿನ ತನ್ನ ಭಕ್ತಿಯನ್ನು ಮಾತ್ರ ಹನುಮನು ವ್ಯಕ್ತಪಡಿಸಿದನು. ಮುಂದೆ ಸೀತಾಮಾತೆಯಿಂದ ಚೂಡಾಮಣಿಯನ್ನು ಪಡೆದುಕೊಂಡು ಹೊರಬಂದ ಹನುಮನು ಅಶೋಕ ವನದಲ್ಲಿದ್ದ ರುಚಿಕರ ಹಣ್ಣುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡನು.

ಆತನಿಗೊಂದು ಯುಕ್ತಿ ಹೊಳೆಯಿತು. ಅಶೋಕವನವನ್ನು ತಾನು ಧ್ವಂಸಗೊಳಿಸಿದರೆ ರಾವಣನ ಮುಂದೆ ತನ್ನನ್ನು ಹಾಜರುಪಡಿಸುತ್ತಾರೆ ಅಲ್ಲಿಗೆ ಆತನ ಸೈನ್ಯದ ಬಲಾಬಲಗಳ ಕುರಿತು ಮಾಹಿತಿ ದೊರೆಯುತ್ತದೆ ಎಂದು ಯೋಚಿಸಿ ಇಡೀ ಅಶೋಕವನದ ಗಿಡ ಮರಗಳನ್ನು ಧ್ವಂಸಮಾಡಲಾರಂಭಿಸಿದ. ಸೈನಿಕರು ನೂರಾರು ಸಂಖ್ಯೆಯಲ್ಲಿ ಬಂದು ಆತನನ್ನು ಎದುರಿಸಿ ಸೋತರು. ಮತ್ತೆ ಸಾವಿರಾರು ಸಂಖ್ಯೆಯ ಸೈನಿಕರನ್ನು ಆತ ಎದುರಿಸಿದನು. ಕೊನೆಗೆ ರಾವಣನ ಪುತ್ರ ಇಂದ್ರಜಿತನ ಕೈಗೆ ಸ್ವ ಇಚ್ಛೆಯಿಂದಲೇ ಸೆರೆ ಸಿಕ್ಕನು.

ಒಂದು ಪುಟ್ಟ ಕೋತಿ ಇಷ್ಟೆಲ್ಲಾ ಹಾಳು ಮಾಡಲು ಸಾಧ್ಯವೇ ಎಂಬ ಅನುಮಾನದಿಂದ ರಾವಣನ ಆಸ್ಥಾನಕ್ಕೆ ಆತನನ್ನು ಕರೆದು ತರಲು ರಾವಣನ ಮುಂದೆ ಪ್ರಭು ಶ್ರೀ ರಾಮನ ದೂತನಾಗಿ ನಿಂತನು ನಮ್ಮ ಹನುಮ. ಮುಂದೆ ರಾವಣನ ಆಣತಿಯಂತೆ ಲಂಕೆಯ ಸೈನಿಕರೆಲ್ಲ ಸೇರಿ ಆತನ ಬಾಲಕ್ಕೆ ಬಟ್ಟೆಯನ್ನು ಸುತ್ತಿ ಬೆಂಕಿ ಇಡಲು ಇಡೀ ಲಂಕೆಯನ್ನು ಬೆಂಕಿಯ ಆಹುತಿಯಲ್ಲಿ ಮುಳುಗಿಸಿದನು. ರಾವಣನ ಸೈನ್ಯದ ತಾಕತ್ತನ್ನು ತಿಳಿದುಕೊಳ್ಳಬೇಕೆಂಬ ಸ್ಪಷ್ಟ ಗುರಿ ಆತನಿಗಿತ್ತು. ಸಮುದ್ರ ತಟದಲ್ಲಿ ತನ್ನ ಬಾಲವನ್ನು ಅದ್ದುವಾಗ ಆತನಿಗೆ ರಾವಣನ ಸೋದರ ವಿಭೀಷಣನ ಭೇಟಿಯಾಯಿತು.

ಮುಂದೆ ಸಮುದ್ರ ಲಂಘನ ಮಾಡಿ ಪ್ರಭು ಶ್ರೀ ರಾಮನ ಮುಂದೆ ಎಲ್ಲವನ್ನು ವರದಿ ಒಪ್ಪಿಸಿದ ಹನುಮನು ತನ್ನೆಲ್ಲ ಕಪಿ ಬಾಂಧವರ ಮೆಚ್ಚುಗೆ, ಹೊಗಳಿಕೆಗಳಿಗೆ ಸ್ಥಿತಪ್ರಜ್ಞನಾಗಿದ್ದನು.

**ಇದು ಸುಂದರ ಕಾಂಡದ ಒಂದು ಪಕ್ಷಿ ನೋಟ.**

ಶಕ್ತಿ, ಯುಕ್ತಿ, ಆತ್ಮವಿಶ್ವಾಸ, ವಿನಯ, ವಿಧೇಯತೆ, ಸ್ಪಷ್ಟ ಗುರಿ,ನಿರ್ಭೀತ ಮತ್ತು ನಿಸ್ವಾರ್ಥಮನೋಭಾವ ಮತ್ತು ಸ್ಥಿತಪ್ರಜ್ಞನಾಗಿದ್ದ ಹನುಮ ಎಂದೆಂದಿಗೂ ರಾಮನ ಭಕ್ತನಾಗಿಯೇ ಉಳಿದನು. ಆದ್ದರಿಂದಲೇ ಆತನಿಗೆ ದೈವತ್ವ ಪ್ರಾಪ್ತಿಯಾಯಿತು. ಅಂತೆಯೇ ಶ್ರೀ ರಾಮನ ಭಕ್ತರೆಲ್ಲರಿಗೂ ಹನುಮ ದೇವರಾದನು.

ಆಂಜನೇಯ, ಪವನಪುತ್ರ, ಮಾರುತಿ, ಕಪೀಶ, ಹನುಮಾನ್ ಹನುಮಪ್ಪ, ಭಜರಂಗಿ ಎಂಬ ಹಲವಾರು ನಾಮಗಳಿಂದ ಕರೆಯಲ್ಪಡುವ ಆಂಜನೇಯನ ಕುರಿತು ಮಹಾನ್ ಆಂಜನೇಯ ಭಕ್ತರಾದ ಸಂತ ತುಳಸಿದಾಸರು ಹನುಮಾನ್ ಚಾಲೀಸಾವನ್ನು ರಚಿಸಿದರು. ಭಾರತ ದೇಶದ ಪ್ರತಿ ಹಳ್ಳಿಗಳಲ್ಲೂ ಹನುಮನ ದೇಗುಲವಿದೆ. ಹನುಮ ನಮ್ಮೆಲ್ಲಾ ಕಷ್ಟ ಕಾರ್ಪಣ್ಯಗಳನ್ನು ಕಳೆವ ದೈವವಾಗಿ ಜನಮನದಲ್ಲಿ ಸದಾ ನೆಲೆಸಿದ್ದಾನೆ.

**"ಬುದ್ದಿರ್ಬಲಮ್ ಯಶೋಧೈರ್ಯಂ ನಿರ್ಭಯತ್ವ0 ಮರೋಗತಃ**
**ಅಜಾಡ್ಯಮ್ ವಾಕ್ಪಟುತ್ವಂಚ**
**ಹನುಮದ ಸ್ಮರಣಾದ್ಭವೇತ್**

# ಕೂಲಿಕಾರರು ಆರೋಗ್ಯವಾಗಿರಲು ಆರೋಗ್ಯ ತಪಾಸಣೆ

■ **ಹಂಪಿ ಟೈಮ್ಸ್ ಕೊಪ್ಪಳ**

ಬೆಣಕಲ್ ಗ್ರಾಮ ಪಂಚಾಯತಿ ವ್ಯಾಪ್ತಿಯ ನರೇಗಾ ಕಾಮಗಾರಿ ಸ್ಥಳದಲ್ಲಿ ಬುಧವಾರದಂದು ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ ಖಾತ್ರಿ, ದುಡಿಮೆಯ ಖಾತ್ರಿ ಅಭಿಯಾನ, ಆರೋಗ್ಯ ತಪಾಸಣಾ ಶಿಬಿರ ಹಾಗೂ ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಹಾಯ ಕ ನಿರ್ದೇಶಕರಾದ (ಗ್ರಾ.ಉ) ಶರಣಪ್ಪ ಕೆಳಗಿನಮನಿ ಮಾತನಾಡಿ, ಮಹಾತ್ಮಗಾಂಧಿ ನರೇಗಾ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಅಕುಶಲ ಕೂಲಿಕಾರ್ಮಿಕರು ಗುಳೆ ಹೋಗದಂತೆ ನೆಮ್ಮದಿಯ ಜೀವನ ನಿರ್ವಹಣೆಗೆ ಮಹಾತ್ವಕಾಂಕ್ಷಿ ಯೋಜನೆಗಳಲ್ಲೊಂದು. ಕೂಲಿಕಾರರು ರೈತಾಪಿ ಕೃಷಿ ಚಟುವಟಿಕೆ ಇಲ್ಲದೇ ಇರುವ, ಅಂದರೆ ಬೇಸಿಗೆ ಅವಧಿಯಲ್ಲಿ ಕೂಲಿಕಾರರು ಬದು ನಿರ್ಮಾಣ, ಕೃಷಿ ಹೊಂಡ, ನಾಲಾ ಸುಧಾರಣೆ, ಕೆರೆಹೂಳೆತ್ತುವ ಕಾಮಗಾರಿ ಸೇರಿದಂತೆ ಹಲವಾರು ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಒಳ್ಳೆಯ ಅವಕಾಶವಿದೆ. ನರೇಗಾ ಆಯುಕ್ತಾಲಯವು ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ ಖಾತ್ರಿ, ದುಡಿಮೆಯ ಖಾತ್ರಿ ಅಭಿಯಾನವನ್ನು ಪ್ರಾರಂಭಿಸಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಿರಂತರ ಕೆಲಸ ನೀಡುತ್ತಿದೆ. ಇದನ್ನು ಎಲ್ಲಾ ಕೂಲಿಕಾರರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.



ಪ್ರಸ್ತುತ ವರ್ಷದಲ್ಲಿ ಶೇ.10 ಕೂಲಿ ಮೊತ್ತವನ್ನು ಸರ್ಕಾರ ಹೆಚ್ಚಿಸಿದ್ದು, ಕೂಲಿ ಮೊತ್ತ ರೂ.349/– ಆಗಿದೆ. ಇದರ ಸದುಪಯೋಗವನ್ನು ಎಲ್ಲ ಕೂಲಿಕಾರರು ಪಡೆದುಕೊಳ್ಳಬೇಕು, ಅಳತೆ ಪ್ರಕಾರ ಕೆಲಸ ಮಾಡಿ ಪೂರ್ಣ ಪ್ರಮಾಣದ ಕೂಲಿಯನ್ನ ಪಡೆದುಕೊಳ್ಳಬೇಕು ಎಂದರು.

ಕೂಲಿಕಾರರ ಆರೋಗ್ಯ ತಪಾಸಣೆ:

ಮತದಾನ ಜಾಗೃತಿ:

ಈಗಾಗಲೇ ಲೋಕಸಭಾ ಚುನಾವಣಾ ದಿನಾಂಕ ಘೋಷಣೆಯಾಗಿದ್ದು, ಎಲ್ಲರೂ ಮೇ–7 ರಂದು ತಪ್ಪದೇ ಮತದಾನ ಮಾಡಬೇಕು. ಸುಭದ್ರ ದೇಶಕ್ಕಾಗಿ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೇ, ಉತ್ತಮ ನಾಯಕರನ್ನು ಆಯ್ಕೆ ಮಾಡುವ ಜವಾಬ್ದಾರಿ ಎಲ್ಲರ ಮೇಲೆ ಇದೆ. ಜನರೇ ತಮ್ಮನ್ನು ಆಳುವ ರಾಜರನ್ನು ಆಯ್ಕೆ ಮಾಡಿಕೊಳ್ಳಲು ನಮ್ಮ ಸಂವಿಧಾನ ಅವಕಾಶ ಕೊಟ್ಟಿದೆ. ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ ಎಂದರು.

ತಾಲೂಕು ಐ.ಇ.ಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ ಪ್ರತಿಜ್ಞಾ ವಿಧಿ ಬೋಧಿಸಿದರು. ಸ್ಥಳದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಬಿ. ಕೃಷ್ಣಾ ರಡ್ಡಿ, ಆರೋಗ್ಯ ಅಧಿಕಾರಿಗಳಾದ ಡಾ. ಶಕುಂತಲಾ ಅಂಗಡಿ, ಗ್ರಾ.ಪಂ ಕಾರ್ಯದರ್ಶಿ ಮಾರುತಿ ಗೊಂಡಬಾಳ, ಆರೋಗ್ಯ ನಿರೀಕ್ಷಕರಾದ ಸೋಮರಡ್ಡಿ, ಸಮುದಾಯ ಆರೋಗ್ಯಾಧಿಕಾರಿಗಳಾದ ಶಂಭುಲಿಂಗೇಶ್, ಗ್ರಾ.ಪಂ ಕಂಪ್ಯೂಟರ್ ಅಪರೇಟರ್ ಉಮೇಶ್ ಯಡಿಯಪ್ಪ ಗೌಡ್ರ, ಗ್ರಾಮ ಕಾಯಕ ಮಿತ್ರರಾದ ಸವಿತಾ ಗೂಳಪ್ಪ ಮುತ್ತಾಳ, ಕಾಯಕ ಮಿತ್ರರು, ಕೂಲಿಕಾರರು ಹಾಜರಿದ್ದರು.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**11–04–2024 – ಗುರುವಾರ**

| | |
|---|---|
| ತಿಥಿ | : ತೃತಿಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಕೃತಿಕಾ |
| ಯೋಗ | : ಪ್ರಿತಿ |
| ಕರಣ | : ಗರಜ |
| ಸೂರ್ಯೋದಯ | : 06:10:52 |
| ಸೂರ್ಯಾಸ್ತ | : 18:45:07 |
| ರಾಹು | : 14:02–15:37 |
| ಯಮಘಂಡ | : 06:11–07:45 |
| ಗುಳಿಕ | : 09:19–10:54 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 10–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1579.12 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 232 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 4.057 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.05 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 3252 ಕ್ಯೂಸೆಕ್ |
| ಸಾಮರ್ಥ್ಯ | 3.593 ಟಿಎಂಸಿ |

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ಅಖಂಡ ಬಳ್ಳಾರಿ ಜಿಲ್ಲೆ ಮುಡಿಗೇರಿದ ಪಿಯು ಕಲಾ ಪ್ರಥಮ ರ್‍ಯಾಂಕ್

## ಅಖಂಡ ಬಳ್ಳಾರಿ ಜಿಲ್ಲೆಗೆ ಶೇ.74ರಷ್ಟು ಫಲಿತಾಂಶ । ರಾಜ್ಯದಲ್ಲಿ 29 ನೇ ಸ್ಥಾನ

**ಹಂಪಿ ಟೈಮ್ಸ್ ಬಳ್ಳಾರಿ**

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಅಖಂಡ ಬಳ್ಳಾರಿ ಜಿಲ್ಲೆ (ಈಗಿನ ವಿಜಯನಗರ ಜಿಲ್ಲೆ ಒಳಗೊಂಡು) ಯು ಶೇ.74 ರಷ್ಟು ಫಲಿತಾಂಶ ಪಡೆದಿದ್ದು, ರಾಜ್ಯದಲ್ಲಿ 29 ನೇ ಸ್ಥಾನದಲ್ಲಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಉಪನಿರ್ದೇಶ ಟಿ.ಪಾಲಾಕ್ಷ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಮಾ.01 ರಿಂದ ಏ.22 ರ ವರೆಗೆ ಅಖಂಡ ಜಿಲ್ಲೆಯಲ್ಲಿ ಒಟ್ಟು 34 ಪರೀಕ್ಷಾ ಕೇಂದ್ರಗಳಲ್ಲಿ ಸುಗಮವಾಗಿ ನಡೆದಿದೆ. ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಹೊಸಬರು, ಪುನರಾವರ್ತಿತ ಮತ್ತು ಖಾಸಗಿ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 28,026 ವಿದ್ಯಾರ್ಥಿಗಳಲ್ಲಿ 20,955 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದು, ಶೇ.74.77 ರಷ್ಟು ಫಲಿತಾಂಶ ಲಭಿಸಿ, ರಾಜ್ಯದಲ್ಲಿ 29 ನೇ ಸ್ಥಾನದಲ್ಲಿದೆ ಎಂದು ಅವರು ತಿಳಿಸಿದ್ದಾರೆ.

**ಅನುತ್ತೀರ್ಣ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಶುಲ್ಕ ಪಾವತಿಸುವ ವಿವರ:** ದ್ವಿತೀಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪೂರಕ ಪರೀಕ್ಷೆ ಬರೆಯಲು ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡಲು ದಂಡ ರಹಿತ ಏ.16 ಕೊನೆ ದಿನವಾಗಿದೆ. ದಂಡ ಸಹಿತ ಪೂರಕ ಪರೀಕ್ಷೆಗೆ ಏ.17 ರಿಂದ 18 ರವರೆಗೆ (ದಿನಕ್ಕೆ ರೂ.50 ರಂತೆ) ಕಾಲಾವಕಾಶ ನೀಡಲಾಗಿದೆ ಎಂದು ಡಿಡಿಪಿಯು ಟಿ.ಪಾಲಾಕ್ಷ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉತ್ತರ ಪತ್ರಿಕೆಯ ಸ್ಕ್ಯಾನಿಂಗ್ ಪ್ರತಿ, ಮರುಮೌಲ್ಯ ಮಾಪನಕ್ಕೆ ಅರ್ಜಿ ಸಲ್ಲಿಸುವ ವಿವರ:**

ಉತ್ತರ ಪತ್ರಿಕೆ ಸ್ಕ್ಯಾನಿಂಗ್ ಪ್ರತಿಗಾಗಿ ಅರ್ಜಿ ಸಲ್ಲಿಸಲು ಏ.10 ರಿಂದ ಏ.16ರ ವರೆಗೆ ಅವಕಾಶವಿದ್ದು, ಪ್ರತಿ ವಿಷಯಕ್ಕೆ ರೂ.530 ನಿಗದಿಯಾಗಿರುತ್ತದೆ. ಉತ್ತರ ಪತ್ರಿಕೆ ಸ್ಕ್ಯಾನಿಂಗ್ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಏ.14 ರಿಂದ ಮೇ 19 ರ ವರೆಗೆ ಅವಕಾಶವಿದ್ದು, ಯಾವುದೇ ಶುಲ್ಕ ನಿಗದಿಯಾಗಿರುವುದಿಲ್ಲ. ಮರು ಮೌಲ್ಯಮಾಪನಕ್ಕಾಗಿ ಹಾಗೂ ಮರು ಎಣಿಕೆಗಾಗಿ ಅರ್ಜಿ ಸಲ್ಲಿಸಲು (ಸ್ಕ್ಯಾನಿಂಗ್ ಪ್ರತಿ ಪಡೆದವರಿಗೆ ಮಾತ್ರ ಅವಕಾಶ) ಏ.15 ರಿಂದ ಏ.20 ರವರೆಗೆ ಅವಕಾಶವಿದ್ದು, ಪ್ರತಿ ವಿಷಯಕ್ಕೆ 1670 ರೂ. ಶುಲ್ಕ ನಿಗದಿಯಾಗಿರುತ್ತದೆ.

# ದ್ವಿತೀಯ ಪಿಯು ಕಲಾ ವಿಭಾಗದಲ್ಲಿ ಕವಿತಾ ರಾಜ್ಯಕ್ಕೆ ಪ್ರಥಮ

## ಸಾಧನೆಗೆ ಅಡ್ಡಿಯಾಗದ ಬಡತನ । ಕುಟುಂಬದಲ್ಲಿ ಹರ್ಷ



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಇಂದು ಪದವಿ ಪೂರ್ವ ಕಾಲೇಜ್ ವಿದ್ಯಾರ್ಥಿನಿ ಕವಿತಾ ಬಿ.ವಿ 2023–24ನೇ ಸಾಲಿನ ದ್ವಿತೀಯ ಪಿಯುಸಿ ಕಲಾ ವಿಭಾಗದ ಫಲಿತಾಂಶದಲ್ಲಿ 600ಕ್ಕೆ 596 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ತನ್ನ ಮುಡಿಗೇರಿಸಿಕೊಂಡಿದ್ದಾಳೆ. ಕೂಡ್ಲಿಗಿ ತಾಲೂಕಿನ ಚೌಡಾಪುರದಲ್ಲಿ ಕೃಷಿಯಲ್ಲಿ ತೊಡಗಿರುವ ತಂದೆ ವೀರಬಸಪ್ಪ, ಟೈಲರಿಂಗ್ ವೃತ್ತಿಯಲ್ಲಿ ತೊಡಗಿಸಿಕೊಂಡ ತಾಯಿ ಸ್ವಾಭಿಮಾನದ ಬದುಕು ಕಟ್ಟಿಕೊಂಡು, ಮಗಳ ಓದಿಗೆ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ತಂದೆ ತಾಯಿ ಪಡುವ ಕಷ್ಟ ಕರಗಿಸಬೇಕೆಂಬ ಛಲದೊಂದಿಗೆ ಓದಿನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಪರಿಣಾಮ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ಸಾಧನೆಗೆ ಬಡತನ ಅಡ್ಡಿಯಲ್ಲ ಎಂಬುದನ್ನು ವಿದ್ಯಾರ್ಥಿನಿ ಕವಿತಾ ನಿರೂಪಿಸಿದ್ದಾಳೆ. ತಂದೆ ತಾಯಿ ಪುತ್ರಿಗೆ ಸಿಹಿ ತಿನಿಸಿ ಸಂಭ್ರಮಿಸಿದರು. ಕುಟುಂಬ ವರ್ಗ ಹಾಗೂ ಕಾಲೇಜು ಸಿಬ್ಬಂದಿ ಹರ್ಷಗೊಂಡಿದ್ದಾರೆ.

**ಅಭಿನಂದನೆ: ವಿಜಯನಗರ** ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿನಿಗೆ ಕರೆಮಾಡಿ ವಿದ್ಯಾರ್ಥಿನಿಯ ಸಾಧನೆಗೆ ಅಭಿನಂದನೆ ತಿಳಿಸಿ, ಬಡತನದಲ್ಲೂ ಸಾಧನೆ ಮಾಡಿ ಇತರರಿಗೆ ಮಾದರಿಯಾಗಿರುವೆ. ಸಾಧನೆಗೆ ಬಡತನ ಅಡ್ಡಿಯಲ್ಲ ಎಂಬುದನ್ನು ತೋರಿಸಿರುವ ನಿನ್ನ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

## ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಪಟ್ಟಿ (ಅಖಂಡ ಬಳ್ಳಾರಿ ಜಿಲ್ಲೆ)

### ಕಲಾ ವಿಭಾಗ

**ಕೊಟ್ಟೂರು ಇಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕವಿತಾ ಬಿ.ವಿ (596 ಅಂಕ) ಜಿಲ್ಲೆಗೆ ಮೊದಲನೇ ಸ್ಥಾನ ಮತ್ತು ರಾಜ್ಯಕ್ಕೆ ಮೊದಲನೇ ರ್‍ಯಾಂಕ್.**

**ಕೊಟ್ಟೂರು ಇಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಶಶಿಧರ.ಡಿ (594 ಅಂಕ) ಜಿಲ್ಲೆಗೆ 2ನೇ ಸ್ಥಾನ ಮತ್ತು ರಾಜ್ಯಕ್ಕೆ ಮೂರನೇ ರ್‍ಯಾಂಕ್.**

**ಹಡಗಲಿಯ ಎಸ್‌ಎಂಎಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಶ್ವಿನಿ.ಬಿ.ಎ (594 ಅಂಕ) ಜಿಲ್ಲೆಗೆ 2ನೇ ಸ್ಥಾನ ಮತ್ತು ರಾಜ್ಯಕ್ಕೆ ಮೂರನೇ ರ್‍ಯಾಂಕ್.**

**ಕೊಟ್ಟೂರು ಇಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಎಂ.ಪಿ.ಬೀರೇಶ್ (593 ಅಂಕ) ಜಿಲ್ಲೆಗೆ 3ನೇ ಸ್ಥಾನ ಮತ್ತು ರಾಜ್ಯಕ್ಕೆ ನಾಲ್ಕನೇ ರ್‍ಯಾಂಕ್.**

**ಇಟಗಿಯ ಪಂಚಮಸಾಲಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಪಿ.ವಿರೇಶ್ (592 ಅಂಕ) ಜಿಲ್ಲೆಗೆ 4ನೇ ಸ್ಥಾನ ಮತ್ತು ರಾಜ್ಯಕ್ಕೆ ಐದನೇ ರ್‍ಯಾಂಕ್.**

**ಕೊಟ್ಟೂರು ಇಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮಾನಸ.ಎನ್ (592 ಅಂಕ) ಜಿಲ್ಲೆಗೆ 4ನೇ ಸ್ಥಾನ ಮತ್ತು ರಾಜ್ಯಕ್ಕೆ ಐದನೇ ರ್‍ಯಾಂಕ್.**

**ಕೊಟ್ಟೂರು ಇಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅನುಷಾ.ಎ (592 ಅಂಕ) ಜಿಲ್ಲೆಗೆ 4ನೇ ಸ್ಥಾನ ಮತ್ತು ರಾಜ್ಯಕ್ಕೆ ಐದನೇ ರ್‍ಯಾಂಕ್.**

### ವಾಣಿಜ್ಯ ವಿಭಾಗ

**ಬಳ್ಳಾರಿಯ ಬಿಪಿಎಸ್‌ಸಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮಾನಸ್ವಿನಿ (592 ಅಂಕ) ಜಿಲ್ಲೆಗೆ ಮೊದಲನೇ ಸ್ಥಾನ.**

**ಇದೇ ಕಾಲೇಜಿನ ವಿದ್ಯಾರ್ಥಿಗಳಾದ ಮೋಕ್ಷಾ (591 ಅಂಕ) ಜಿಲ್ಲೆಗೆ 2ನೇ ಸ್ಥಾನ.**

**ನಂದಿನಿ (590 ಅಂಕ) ಮತ್ತು ಆದಿತ್ಯ ಲುಂಕರ್ (590 ಅಂಕ) ಇಬ್ಬರೂ ಕ್ರಮವಾಗಿ ಜಿಲ್ಲೆಗೆ 3 ನೇ ಪಡೆದಿದ್ದಾರೆ.**

### ವಿಜ್ಞಾನ ವಿಭಾಗ

**ಹಗರಿಬೊಮ್ಮನಹಳ್ಳಿಯ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಯಶ್ವಂತ್ (592 ಅಂಕ) ಜಿಲ್ಲೆಗೆ ಮೊದಲನೇ ಸ್ಥಾನ.**

**ಬಳ್ಳಾರಿಯ ಜ್ಞಾನಾಮೃತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ದೇವರಾಜ (590 ಅಂಕ) ಜಿಲ್ಲೆಗೆ 2 ನೇ ಸ್ಥಾನ.**

**ಕೊಟ್ಟೂರಿನ ಸನ್ನಿಧಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಶರತ್ ಕುಮಾರ್. ಕೆ.ಎಂ (587 ಅಂಕ) ಮತ್ತು ಕೊಟ್ಟೂರಿನ ಇಂದು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಮೃತ.ಹೆಚ್.ಎಸ್ (587 ಅಂಕ) ಅವರು ಕ್ರಮವಾಗಿ ಜಿಲ್ಲೆಗೆ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.**

## ಏ.12ರವರೆಗೆ ಕುಡಿಯುವ ನೀರಿನ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದಲ್ಲಿ 2ನೇ ಹಂತದ ಜಲಶುದ್ಧೀಕರಣ ಘಟಕದ ರೈಜಿಂಗ್ ಮೇನ್ (ಮುಖ್ಯ ಕೊಳವೆ) ದುರಸ್ಥಿ ಕೆಲಸ ನಡೆಯುತ್ತಿರುವ ಪ್ರಯುಕ್ತ ಏಪ್ರೀಲ್ 11 ಮತ್ತು 12ರವರೆಗೆ ನಗರದ 7ನೇ ವಾರ್ಡ್, 8, 9 ಹಾಗೂ 18 ರಿಂದ 35ನೇ ವಾರ್ಡಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡಲಾಗುವುದಿಲ್ಲ. ಕಾರಣ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಹೊಸಪೇಟೆ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶೇಕರ ದಮ್ಮೂರ ಪಿಹೆಚ್‌ಡಿ ಪದವಿ

**ಹಂಪಿ ಟೈಮ್ಸ್ ಬಳ್ಳಾರಿ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಶೇಕರ ದಮ್ಮೂರ ಅವರಿಗೆ ಪಿಹೆಚ್‌ಡಿ ಪದವಿ ಲಭಿಸಿದೆ.

ವಿಶ್ವ ವಿದ್ಯಾಲಯದ ಇಂಗ್ಲೀಷ್ ಅಧ್ಯಯನ ವಿಭಾಗದ ಕಲಾ ನಿಕಾಯದ ಇಂಗ್ಲೀಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ಡಾ.ಶಾಂತನಾಯ್ಕ.ಎನ್ ಅವರ ಮಾರ್ಗದರ್ಶನದಲ್ಲಿ "ಕ್ರಾಸ್ ಕಲ್ಚರಲ್ ಹೈಬ್ರಿಡಿಟಿ ಅಂಡ್ ಟ್ರಾನ್ಸ್‌ನ್ಯಾಷನಲ್ ಇಷ್ಯೂಸ್ ಇನ್ ದಿ ಸೆಲೆಕ್ಟ್ ನಾವೆಲ್ಸ್ ಆಫ್ ಮೈಕೆಲ್ ಒಂದಾಚೆ" ಎಂಬ ವಿಷಯ ಕುರಿತು ಪ್ರಬಂಧ ಮಂಡನೆ ಮಾಡಿದ್ದಕ್ಕಾಗಿ ವಿಶ್ವ ವಿದ್ಯಾಲಯವು ಶೇಕರ ದಮ್ಮೂರ ಅವರಿಗೆ ಪಿಹೆಚ್‌ಡಿ ಪದವಿ ಘೋಷಿಸಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

## ತೆಗ್ಗಿನ ಓಣಿ ದ್ಯಾಮಮ್ಮನ ಜಾತ್ರೆಯಲ್ಲಿ ಬಲಿ ನಿಷಿದ್ಧ

**ಹಂಪಿ ಟೈಮ್ಸ್ ಕೊಪ್ಪಳ**

ಕುಷ್ಟಗಿ ಪೊಲೀಸ್ ಠಾಣಾ ವ್ಯಾಪ್ತಿಯ ಕುಷ್ಟಗಿ ಪಟ್ಟಣದ ತೆಗ್ಗಿನ ಓಣಿಯಲ್ಲಿರುವ ಶ್ರೀ ದ್ಯಾಮಮ್ಮನ ಜಾತ್ರೆಯು ಸುಮಾರು 65 ವರ್ಷಗಳ ನಂತರ ಏಪ್ರಿಲ್ 09 ರಿಂದ 20 ರವರೆಗೆ ನಡೆಯಲಿದ್ದು, ಈ ಸಮಯದಲ್ಲಿ ಕೋಣ, ಟಗರು, ಕುರಿ, ಕೋಳಿಗಳನ್ನು ದೇವಸ್ಥಾನದ ಸುತ್ತಮುತ್ತಲಿನ ಪರಿಸರದಲ್ಲಿ ಬಲಿ ಕೊಡುವುದನ್ನು ಹೈಕೋರ್ಟ್ ನಿರ್ದೇಶನದಂತೆ ನಿಷೇಧಿಸಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕು ಹಾಗೂ ಹೈಕೋರ್ಟ್ ನಿರ್ದೇಶನವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಕುಷ್ಟಗಿ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಪಿಯುಸಿಯಲ್ಲಿ ಸಾಧನೆಗೈದ ನಿಮ್ಮ ನೆಚ್ಚಿನ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಬೇಕೇ?,
ಪ್ರವೇಶ ಹಾಗೂ ಅಭಿನಂದನೆ ಜಾಹೀರಾತು ಬುಕ್ಕಿಂಗ್‌ಗಾಗಿ
ಕೂಡಲೇ ಸಂಪರ್ಕಿಸಿ: ಹಂಪಿ ಟೈಮ್ಸ್ : 9448633038

# ಏ.14ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಏಪ್ರಿಲ್ 14ರ ಬೆಳಗ್ಗೆ 9.15ಕ್ಕೆ ಹೊಸಪೇಟೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಅವರ ವೃತ್ತದಲ್ಲಿರುವ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಪೂಜಾ ಕಾರ್ಯಕ್ರಮ ನಡೆಯಲಿದ್ದು, ಪ್ರಯುಕ್ತ ವಿಜಯನಗರ ಜಿಲ್ಲೆಯ ಎಲ್ಲಾ ಸಮುದಾಯದ ಸಂಘ–ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ, ಹೊಸಪೇಟೆ ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ವಿಜಯನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಮಂಜುನಾಥ ಹೆಚ್.ವಿ. ಅವರು ಮನವಿ ಮಾಡಿದ್ದಾರೆ.

# ನಿರ್ಜನ ಪ್ರದೇಶದಲ್ಲಿ ಸಾರ್ವಜನಿಕರು ಒಬ್ಬರೇ ಓಡಾಡವುದು ತಪ್ಪಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಬೇಸಿಗೆಯ ಬಿಸಿಲು ಪ್ರಖರವಾಗಿ ಕಂಡುಬರುತ್ತಿದ್ದು, ಬಿಸಿಲಿನ ಶಾಖಾಘಾತಕ್ಕೆ ಒಳಗಾಗುವ ಸಂಭವ ಹೆಚ್ಚಿದ್ದು, ನಿರ್ಜನ ಪ್ರದೇಶದಲ್ಲಿ ಸಾರ್ವಜನಿಕರು ಒಬ್ಬರೇ ಓಡಾಡುವುದನ್ನು ತಪ್ಪಿಸುವ ಮೂಲಕ ಬಿಸಿಲಿನ ಸೂರ್ಯಘಾತದ ಅನಾಹುತದಿಂದ ಪಾರಾಗಲು ಮುನ್ನೆಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ ಡಾ.ವೈ.ರಮೇಶ ಬಾಬು ಕೋರಿದ್ದಾರೆ.

ಮಧ್ಯಾಹ್ನ 01 ರಿಂದ 04 ಗಂಟೆ ಅವಧಿಯಲ್ಲಿ ವಯೋವೃದ್ಧರು, ಮಕ್ಕಳು, ಗರ್ಭಿಣಿ ಮತ್ತು ದೀರ್ಘಕಾಲಿನ ಖಾಯಿಲೆಗಳಿಗೆ ಔಷಧಿ ಸೇವಿಸುವ ಪ್ರತಿಯೊಬ್ಬರು ಆದಷ್ಟು ನೆರಳಿನಲ್ಲಿ ಇರುವುದಕ್ಕೆ ಆದ್ಯತೆ ನೀಡಬೇಕು. ಯಾರೂ ನಿರ್ಜನ ಪ್ರದೇಶದಲ್ಲಿ ಒಬ್ಬಂಟಿಗರಾಗಿ ಹೋಗದೇ ಸೂರ್ಯಾಘಾತದ ಅನಾಹುತದಿಂದ ತಪ್ಪಿಸಲು ಪ್ರತಿಯೊಬ್ಬರೂ ಆರೋಗ್ಯ ಇಲಾಖೆಗೆ ಕೈ ಜೋಡಿಸಬೇಕು ಎಂದು ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ನಿರ್ಜಲೀಕರಣ ತಡೆಗಟ್ಟಲು ಓ.ಆರ್.ಎಸ್ ಜೀವಜಲ ಪುಡಿಯನ್ನು ಅಗತ್ಯವುಳ್ಳವರಿಗೆ ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ರೋಗಿಗಳ ಆರೈಕೆಗಾಗಿ, ಐವಿ ಫ್ಲೂಯಿಡ್ಸ್ ಮತ್ತು ಜೀವರಕ್ಷಕ ಔಷಧಗಳ ದಾಸ್ತಾನು ಇಟ್ಟುಕೊಳ್ಳಲಾಗಿದೆ.

ಓ.ಆರ್.ಎಸ್. ದ್ರಾವಣವನ್ನು 1 ಲೀಟರ್ ನೀರಿಗೆ 1 ಪೊಟ್ಟಣದ ಸಂಪೂರ್ಣ ಪುಡಿಯನ್ನು ಹಾಕಿ 24 ಗಂಟೆಯೊಳಗಡೆ ಕುಡಿಯಲು ಬಳಸುವ ಮೂಲಕ ಬಿಸಿಲಿನ ಪ್ರಖರತೆಯಿಂದ ಉಂಟಾಗುವ ನಿರ್ಜಲೀಕರಣವನ್ನು ತಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ ಜಿಲ್ಲಾಡಳಿತ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಕಾರದೊಂದಿಗೆ ಜಿಲ್ಲೆಯಲ್ಲಿ ಜರುಗುತ್ತಿರುವ ಪ್ರಮುಖ ಜಾತ್ರೆಗಳಲ್ಲಿ ನಿರ್ಜಲೀಕರಣವನ್ನು ತಡೆಗಟ್ಟಲು ತುರ್ತು ಚಿಕಿತ್ಸಾ ಕೇಂದ್ರಗಳನ್ನು ತೆರೆದು ಓಆರ್‌ಎಸ್ ಜೀವಜಲವನ್ನು ಸಿದ್ದಪಡಿಸಿ ಜನತೆಗೆ ಒದಗಿಸುವ ಕಾರ್ಯ ಮಾಡಲಾಗುತ್ತಿದೆ.

ಜಿಲ್ಲಾ ಕಾಲರಾ ತಂಡದಿಂದ ಕುಡಿಯುವ ನೀರಿನ ಮೂಲಗಳನ್ನು ನಿರಂತರವಾಗಿ ಪರೀಕ್ಷಿಸಿ ಕುಡಿಯಲು ಯೋಗ್ಯವೆಂದು ಖಚಿತಪಡಿಸಿದ ನಂತರವೇ ಜಾತ್ರೆಯಲ್ಲಿ ಯಾವುದೇ ವಾಂತಿ, ಬೇಧಿ ಪ್ರಕರಣಗಳು ವರದಿಯಾಗದಂತೆ ಕ್ರಮವಹಿಸಲಾಗಿದೆ. ಲೋಕಸಭಾ ಚುನಾವಣೆಯ ಹಿನ್ನಲೆ ಜಿಲ್ಲೆಯ ಗಡಿಭಾಗದಲ್ಲಿ ಹಾಗೂ ಇತರೆಡೆ ತೆರೆದಿರುವ 24 ಚೆಕ್‌ಪೋಸ್ಟ್ ಸಿಬ್ಬಂದಿಯವರಿಗೆ ಓಆರ್‌ಎಸ್ ಪೊಟ್ಟಣಗಳನ್ನು ಹಾಗೂ ತುರ್ತು ಚಿಕಿತ್ಸಾ ಔಷಧಿಗಳನ್ನು ವಿತರಿಸಲಾಗಿದೆ.

ಸಾರ್ವಜನಿಕರು ಮಧ್ಯಾಹ್ನದ ವೇಳೆ ಅಗತ್ಯವೆನಿಸುವ ಸಂದರ್ಭಗಳಲ್ಲಿ ಮನೆಯಿಂದ ಹೊರಗಡೆ ಬರುವಾಗ ಕುಡಿಯುವ ಶುದ್ಧವಾದ ನೀರು, ಹಾಗೂ ಛತ್ರಿ ಮತ್ತು ಮಕ್ಕಳನ್ನು ಕರೆದುಕೊಂಡು ಹೋಗುವಾಗ ಮಕ್ಕಳಿಗೆ ತಲೆಯ ಮೇಲೆ ನೀರಿನಿಂದ ಒದ್ದೆ ಮಾಡಿದ ಬಟ್ಟೆಯನ್ನು ಹಾಕಬೇಕು. ಮಕ್ಕಳ ಆರೋಗ್ಯದಲ್ಲಿ ಏರುಪೇರು ಆಗದಂತೆ ಕಾಳಜಿವಹಿಸಬೇಕು ಎಂದು ತಿಳಿಸಿದ್ದಾರೆ.

# ಹೊಸಪೇಟೆ ಅನಂತಶಯನಗುಡಿ ಶ್ರೀ ಸಪ್ತಾಂಜನೇಯ ಸ್ವಾಮಿಯ ರಥೋತ್ಸವ



ಹೊಸಪೇಟೆ ಅನಂತಶಯನಗುಡಿಯಲ್ಲಿರುವ ಶ್ರೀ ಸಪ್ತಾಂಜನೇಯ ಸ್ವಾಮಿಯ ರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು. ನಗರ ಹಾಗೂ ಗ್ರಾಮೀಣ ಪ್ರದೇಶಗಳ ಭಕ್ತರು ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.

# ಹೊಸಪೇಟೆ ತಾಲೂಕಿನ ಧರ್ಮದ ಗುಡ್ಡದಲ್ಲಿ ಎಲೆ ಉದುರಿಸಿ ಅರಳಿದ ದೇವಗಣಗಲಿ ಹೂ



ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಸಮೀಪದ ಧರ್ಮದಗುಡ್ಡದಲ್ಲಿ ಕಲ್ಲುಬಂಡೆಗಳ ಮದ್ಯೆ ಬೃಹದಾಕಾರವಾಗಿ ಚನ್ನಬಸವೇಶ್ವರ ಸ್ವಾಮಿಯ ಪೂಜೆಗೆಂದೇ ಬೆಳೆದು ನಿಂತಿರುವ ದೇವಗಣಗಲಿ ಮರ ಎಲೆ ಇಲ್ಲದಿದ್ದರೂ ಮರದ ತುಂಬ ಹೂಬಿಟ್ಟು ನೋಡುಗರನ್ನು ಆಕರ್ಷಿಸುತ್ತಿದೆ.

# ಹರಪನಹಳ್ಳಿಯಲ್ಲಿ ಮೊದಲ ಮಳೆ, ಜನರಲ್ಲಿ ಹರ್ಷ

**ಹಂಪಿ ಟೈಮ್ಸ್ ಹರಪನಹಳ್ಳಿ**

ವರ್ಷದ ಪ್ರಾರಂಭದ ಮೊದಲ ಮಳೆಯು ಮಂಗಳವಾರ ಸಂಜೆ ಪಟ್ಟಣ ಸೇರಿದಂತೆ, ಬಾಗಳಿ ಶೃಂಗಾರತೋಟ, ದಡಿಗಾರನಹಳ್ಳಿ, ಹೊಂಬಳಗಟ್ಟಿ, ಸೇರಿದಂತೆ ವಿವಿದೆಡೆ ಬಿರುಸಿನ ಮಳೆಯಾಗಿದೆ. ಜೋರಾದ ಗಾಳಿಯಿಂದ ಪಟ್ಟಣದ ಹಲವು ಕಡೆ ಮರ ಗಿಡಗಿಡಗಳು ಧರೆಗುರುಳಿವೆ. ಯುಗಾದಿ ಹಬ್ಬದಂದು ಮಳೆಯು ಧರೆಗೆ ಇಳಿದ ಪರಿಣಾಮ ಜನಗಳ ಮೊಗದಲ್ಲಿ ಹರ್ಷ ಜೊತೆಗೆ, ಅತಿಯಾದ ತಾಪಮಾನದಿಂದ ರೋಸಿ ಹೋಗಿದ್ದ ಜನತೆಗೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ, ಪಟ್ಟಣದಲ್ಲಿ ಸುಮಾರು 40 ನಿಮಿಷಗಳವರೆಗೆ ಸುರಿದ ಜೋರಾದ ಮಳೆ ಹಾಗೂ ಗಾಳಿಯಿಂದ ಪಟ್ಟಣದ ಹಲವೆಡೆ ಮರ, ಗಿಡಗಳು ಬಿದ್ದಿರುವುದು ಬಿಟ್ಟರೇ, ಯಾವುದೇ ರೀತಿಯ ಹಾನಿ ಸಂಭವಿಸಿಲ್ಲ.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA